ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 173 RNI Number : KNKAN/25/A2770 01-07-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :173 ರಾಯಚೂರು 01-07-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರಿಗೆ ಗ್ಯಾರಂಟಿ ಸೌಲಭ್ಯ ಇಲ್ಲ : ಸಿಎಂ ಡಿಕೆಶಿ

ಬೆಂಗಳೂರು, ಜೂ. 30- ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಬಳಿಕ ಮತದಾರರ ಪಟ್ಟಿಗೆ ಸೇರದೇ ಇರುವವರಿಗೆ ಬಿಹಾರ, ಪಶ್ಚಿಮಬಂಗಾಳ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳು ಹಾಗೂ ಇತರ ಸರ್ಕಾರಿ ಸೌಲಭ್ಯಗಳನ್ನು ಸ್ಥಗಿತಗೊಳಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲೂ ಇದೇ ವ್ಯವಸ್ಥೆ ಬರುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ತಮ್ಮ ಮನೆಯ ಬಳಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಎಲ್‌ಓಗಳು ಇಂದು ತಮ ನಿವಾಸಕ್ಕೆ ಬಂದು ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆಗಳನ್ನು ನಡೆಸಿದ್ದಾರೆ. ಎನ್ಯುಮರೇಷನ್ ಅರ್ಜಿ ನಮೂನೆಗಳಿಗೆ ನಾನು ಸಹಿ ಹಾಕಿದ್ದೇನೆ ಎಂದು ತಿಳಿಸಿದರು.

ಇಂದಿನಿಂದ ಪ್ರಾರಂಭವಾಗಿರುವ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ ಎಲ್ಲರೂ ತಮ ಹೆಸರುಗಳನ್ನು ಸೇರಿಸಬೇಕು. ಈ ಮೊದಲು ಮತದಾರರ ಪಟ್ಟಿಯ ನೋಂದಣಿ ವೇಳೆ ನೀಡಲಾಗಿದ್ದ ಮೊಬೈಲ್ ಸಂಖ್ಯೆಗೆ ಓಟಿಪಿ ಬರುತ್ತದೆ. ಒಂದು ವೇಳೆ ಮೊಬೈಲ್ ಸಂಖ್ಯೆ ಬದಲಾಗಿದ್ದರೆ, ಪ್ರಸ್ತುತ ಬಳಕೆ ಹಾಗೂ ಚಾಲ್ತಿಯಲ್ಲಿರುವ ಮೊಬೈಲ್ ನಂಬರ್ ಅನ್ನು ಲಿಂಕ್ ಮಾಡಲು ಬಿಎಲ್‌ಎಗಳಿಗೆ ತಿಳಿಸುವಂತೆ ಮುಖ್ಯಮಂತ್ರಿ ಸಲಹೆ ನೀಡಿದರು.

ಎನ್ಯುಮರೇಷನ್ ಅರ್ಜಿ ನಮೂನೆಗಳಲ್ಲಿ ಎರಡು ಪ್ರತಿಗಳನ್ನು ಕೊಡುತ್ತಾರೆ. ಒಂದನ್ನು ಸಹಿ ಮಾಡಿ, ಬಿಎಲ್‌ಎಗಳಿಗೆ ನೀಡಬೇಕು. ಮತ್ತೊಂದನ್ನು ಮತದಾರರೆ ಇಟ್ಟುಕೊಳ್ಳಬೇಕು. ಕುಟುಂಬದ ಬಗ್ಗೆ ಸ್ಪಷ್ಟ ಹಾಗೂ ಸಮಗ್ರ ಮಾಹಿತಿ ಇರುವ ಜವಾಬ್ದಾರಿಯುತ ವ್ಯಕ್ತಿಯೊಬ್ಬರು ಅರ್ಜಿ ನಮೂನೆಗಳಿಗೆ ಸಹಿ ಹಾಕಬೇಕು ಎಂದು ಹೇಳಿದರು.

ಇಂದಿನಿಂದ 7 ದಿನಗಳ ಕಾಲ ಪ್ರತಿಯೊಂದು ಮನೆಗೂ ಅರ್ಜಿ ನಮೂನೆಗಳನ್ನು ತಲುಪಿಸಲಾಗುತ್ತದೆ. ಅದನ್ನು ವಾಪಸ್ ನೀಡಲು 29 ದಿನಗಳ ಕಾಲಾವಕಾಶ ಇದೆ. ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಂಡು ಎಲ್ಲರೂ ತಮ ಮತದಾನ ಹಕ್ಕುಗಳನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೊಬೈಲ್ ಆ್ಯಪ್ ಬಳಕೆ ಬಗ್ಗೆ ಕೆಲವರಿಗೆ ಸರಿಯಾದ ಮಾಹಿತಿ ಇರುವುದಿಲ್ಲ. ಈ ವಿಚಾರದಲ್ಲಿ ನಾನು ಕೂಡ ಅನಕ್ಷರಸ್ಥನಿದ್ದೇನೆ. ಮೊಬೈಲ್ ಆ್ಯಪ್ ಡೌನ್‌ಲೋಡ್ ಮಾಡಲು ನನಗೂ ಸಾಧ್ಯವಾಗಲಿಲ್ಲ. ಹೀಗಾಗಿ ಪ್ರತಿಯೊಬ್ಬರೂ ನೇರವಾಗಿಯೇ ಅರ್ಜಿ ನಮೂನೆಗಳನ್ನು ಬಿಎಲ್‌ಎಗಳಿಗೆ ತಲುಪಿಸಬೇಕೆಂದು ಮುಖ್ಯಮಂತ್ರಿಯವರು ಸಲಹೆ ನೀಡಿದರು.

ಒಂದು ವೇಳೆ ಮತದಾರರ ಪಟ್ಟಿಯಲ್ಲಿರುವ ಹಳೇ ಫೋಟೋವನ್ನು ಬದಲಾವಣೆ ಮಾಡಬೇಕು ಎಂದಾದರೆ, ಹೊಸ ಫೋಟೋವನ್ನು ಮತದಾರರು ನೀಡಬಹುದು ಎಂದು ಮುಖ್ಯಮಂತ್ರಿ ಹೇಳಿದರು.

ಮತದಾರರಲ್ಲದವರಿಗೆ ಗ್ಯಾರಂಟಿ ಯೋಜನೆಗಳನ್ನು ನೀಡುವುದು ಸರಿಯಲ್ಲ. ಕೆಲವರು ಬೇರೆ ರಾಜ್ಯಗಳಲ್ಲಿ ನೋಂದಾಯಿಸಿಕೊಂಡು ಅಲ್ಲಿಯೂ ಸರ್ಕಾರಿ ಸೌಲಭ್ಯಗಳನ್ನು ಪಡೆದಿರುತ್ತಾರೆ. ಇಲ್ಲಿಯೂ ಅವರಿಗೆ ಗ್ಯಾರಂಟಿ ಯೋಜನೆಗಳನ್ನು ನೀಡುವುದು ಸೂಕ್ತವಲ್ಲ. ರಾಜ್ಯದ ಮತದಾರರಲ್ಲದವರಿಗೆ ಸೌಲಭ್ಯಗಳನ್ನು ನೀಡುವುದನ್ನು ನಿಯಂತ್ರಿಸಲಾಗುತ್ತದೆ ಎಂದು ಅವರು ಹೇಳಿದರು.



ಶಾಸಕರಿಂದ ಅರ್ಜಿ ಭರ್ತಿ ಮಾಡಿ 2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಚಾಲನೆ

ಸಿರವಾರ,ಜೂ.30-

2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಅರ್ಜಿಯಲ್ಲಿರುವ ಮಾಹಿತಿಗಳನ್ನು ಪೂರ್ಣವಾಗಿ ಭರ್ತಿ ಮಾಡುವ ಮೂಲಕ ನಾನು ಮತ್ತು ನನ್ನ ಕುಟುಂಬವದವರು ಮತದಾರರ ಪಟ್ಟಿಯಲ್ಲಿ ಹೆಸರು ಉಳಿಯುವಂತೆ ಮಾಡಿಕೊಂಡಿರುವೆ 18 ವರ್ಷ ತುಂಬಿದವರು ಎಲ್ಲಾರೂ ಸೂಕ್ತ ದಾಖಲೆಗಳನ್ನು ನೀಡುವ ಮೂಲಕ ನೊಂದಣಿ ಮಾಡಿಸಿಕೊಳ ಬೇಕು ಎಂದು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯನಾಯಕ ಮನವಿ ಮಾಡಿದರು.



ರಾಜ್ಯಾದ್ಯಂತ ಇಂದಿನಿಂದ ಪ್ರಾರಂಭವಾಗಿರುವ. 2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್ ಐ ಆರ್) ಸಮೀಕ್ಷೆಗೆ ತಾಲೂಕಿನ ಬಲ್ಲಟಗಿ ಗ್ರಾಮದಲ್ಲಿ ತಮ್ಮ ನಿವಾಸಕ್ಕೆ ಆಗಮಿಸಿ ಸಹಾಯಕ ಆಯುಕ್ತಾ ಡಾ ಹಂಪಣ್ಣ ಸಜ್ಜನ್ ಮತ್ತು ತಹಸೀಲ್ದಾರ ಅಶೋಕ ಪವಾರ ಅವರಿಗೆ ಮಾಹಿತಿ ನೀಡುವ ಮೂಲಕ (ಎಸ್ ಐಆರ್) 2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಎನಾಮಿರೇಶನ್ ಅರ್ಜಿ ಭರ್ತಿ ಮಾಡುವುದರ ಮುಖಾಂತರ ಕಾರ್ಯಕ್ಕೆ ಚಾಲನೆ ನೀಡಿ ನಂತರ ಮಾತನಾಡಿದ ಅವರು 2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಗಾಗಿ ಮನೆಗೆ ಬರುವ ಅಧಿಕಾರಿಗಳು ಕೇಳುವ ಮಾಹಿತಿ, ಸೂಕ್ತ ದಾಖಲೆಗಳನ್ನು ನೀಡುವವಮೂಲಕ ಸಹಕಾರಿ ಮಾಡಿ. ಯಾರು ಸಹ ಮತದಾರ ಪಟ್ಟಿಯಿಂದ ಹೊರಗುಳಿಯಬಾರದು.

ಗ್ರಾಮೀಣ ಪ್ರದೇಶದಲ್ಲಿ ಕೂಲಿ ಕಾರ್ಮಿಕರು ಹೆಚ್ಚಾಗಿ ಇರುತ್ತಾರೆ. ಅವರು ಕೆಲಸಕ್ಕೆ ಹೋಗಿರುತ್ತಾರೆ. ಮುಂಜಾನೆ ಬೇಗ ಅಥವಾ ಸಂಜೆ ವೇಳೆ ಮನೆಗಳಿಗೆ ಹೋದರೆ ಸಿಗುತ್ತಾರೆ. ಸುಲಭವಾಗಿ ನೊಂದಣಿ ಮಾಡಬಹುದು. ಬಿಎಲ್ ಒ ಗಳು ಸಹ ಅಧಿಕಾರಿಗಳಿಗೆ ಸಹಾಯ ಸಹಕಾರಿ ನೀಡಿ. ಒಂದು ಬಾರಿ ನೊಂದಣಿಯಾದರೆ ಸಾಕು. ಮುಂದೆ ಸರ್ಕಾರಿ ಸೌಲಭ್ಯಗಳು ಪಡೆಯಲು ಅನುಕೂಲ ಆಗುತ್ತದೆ ಎಂದರು.

ನಂತರ ಸಹಾಯಕ ಆಯುಕ್ತಾ ಡಾ ಹಂಪಣ್ಣ ಸಜ್ಜನ್ ಮಾತನಾಡಿ ನೊಂದಣಿಗಾಗಿ ಸಂಬಂಧ ಪಟ್ಟ ಅದಿಕಾರಿಗಳು 3 ಬಾರಿ ಮನೆಗಳಿಗೆ ಬೇಟಿ ನೀಡಿ ಮಾಹಿತಿ ಪಡೆಯುತ್ತಾರೆ. ಪದೆ ಪದೇ ಬರುತ್ತಾರೆ ಎಂದು ಯಾರಿಗು ಭಯ ಬೇಡ, ಮತದಾರ ಪಟ್ಟಿಯಲಿರುವ ಲೋಪದೋಷಗಳನ್ನು, ಭಾವಚಿತ್ರಗಳನ್ನು ಸರಿಪಡಿಸಿಕೊಳಿ. ನೊಂದಣಿಯಾದ ಮನೆಗೆ ನೇರಳೆ ಬಣ್ಣದ ಸ್ಟಿಕರ್ ಹಚ್ಚುತ್ತಾರೆ. ಮೂರು ಬಾರಿ ಮನೆಗೆ ಹೊದರೂ ಮನೆಯವರು ಸಿಗದಿದ್ದರೆ. ಕೆಂಪು ಬಣ್ಣದ ಸ್ಟೀಕರ್ ಹಚ್ಚುತ್ತಾರೆ.

ಆಗ ಅಂತಹ ಕುಟುಂಬ

3ನೇ ಪುಟ.....

ಸಿರವಾರದಲ್ಲಿ ಕಾರು ಹುಣ್ಣಿಮೆ -ಎತ್ತುಗಳ ಭವ್ಯ ಮೆರವಣಿಗೆ



ಸಿರವಾರ,ಜೂ.30-

ತಾಲೂಕಿನ ವಿವಿಧೆಡೆ ರೈತರು ಮುಂಗಾರಿನ ಮೊದಲ ಹಬ್ಬ ಕಾರಹುಣ್ಣಿಮೆಯನ್ನು ಸಂಭ್ರಮದಿಂದ ಆಚರಿಸಿದರು. ರೈತರು ತಮ್ಮ ಎತ್ತು, ಹಸುಗಳಿಗೆ ಸ್ನಾನ ಮಾಡಿಸಿ ವಿವಿಧ ಬಗೆಯ ಅಲಂಕಾರ ಮಾಡಿ ಸಂಭ್ರಮಿಸಿದರು. ರೈತರ ಜೀವನಾಡಿಯಾಗಿರುವ ಎತ್ತುಗಳ ತಲೆಗೆ ಹೂವಿನ ಗೊಂಡೆ, ಕೊರಳಿಗೆ ಗೆಜ್ಜೆ, ಟೊಂಕಕ್ಕೆ ಕಪ್ಪುದಾರ, ಕೋಡಿಗೆ ಬಣ್ಣ, ದೇಹಕ್ಕೆ ಕೆಂಪು, ಹಳದಿ ಬಣ್ಣ ಹಚ್ಚಿ ಶೃಂಗಾರಗೊಳಿಸಿ ಪಟ್ಟಣದ ವಾರ್ಡ ನಂ 19-20 ವಿದ್ಯಾನಗರದಿಂದ, ಅಂಚೆಕಛೇರಿ, ಬಯಲು ಆಂಜನೇಯ್ಯ ದೇವಸ್ಥಾನದಿಂದ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಬಸವೇಶ್ವರ ವೃತ್ತಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ಸಂಭ್ರಮಿಸಿದರು. ಸಂಜೆ ರೈತರು ತಮ್ಮ ನೆಚ್ಚಿನ ಎತ್ತುಗಳಿಂದ ಕರಿ ಹರಿಯುವ ಮೂಲಕ ಕಾರಹುಣ್ಣಿಮೆ ಹಬ್ಬದ ಸಂಭ್ರಮದಲ್ಲಿ ಮಿಂದೆದ್ದರು. ಈ ಸಂದರ್ಭದಲ್ಲಿ ನಿಂಬಯ್ಯ ಸ್ವಾಮಿ, ಪ.ಪಂ ಸದಸ್ಯೆ ಪತಿ ಮಲ್ಲಪ್ಪ, ರಾಮಯ್ಯ ಸೇರಿದಂತೆ ಇನ್ನಿತರರು ಇದ್ದರು.

ರಾಜ್ಯಸಭೆಯಲ್ಲಿ ಮತ್ತೆ ಖರ್ಗೆಜಿ; ನಾಯಕರಿಂದ ಪುಷ್ಪಗುಚ್ಛ ನೀಡಿ ಅಭಿನಂದನೆ



ರಾಯಚೂರು,ಜೂ.30-

ಸಾರ್ವಜನಿಕ ಜೀವನದಲ್ಲಿ ಸುಮಾರು ಐದು ದಶಕಗಳ ಕಾಲ ಜನಸೇವೆ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಬದ್ಧತೆಯಿಂದ ಸೇವೆ ಸಲ್ಲಿಸಿರುವ ಮಲ್ಲಿಕಾರ್ಜುನ್ ಖರ್ಗೆ ಅವರು ಮತ್ತೊಮ್ಮೆ ರಾಜ್ಯಸಭೆಯ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ತಳಮಟ್ಟದ ಕಾರ್ಯಕರ್ತನಾಗಿ ರಾಜಕೀಯ ಪಯಣ ಆರಂಭಿಸಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನವರೆಗೆ ಏರಿದ ಅವರ ಜೀವನ ಪಯಣ ಪರಿಶ್ರಮ, ಸಮಗ್ರತೆ ಹಾಗೂ ದೃಢ ನಾಯಕತ್ವದ ಪ್ರತೀಕವಾಗಿದೆ ಎಂದು ಈ ಸಂದರ್ಭದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಾರ್ವಜನಿಕ ಜೀವನಕ್ಕೆ ಅವರ ಅನುಭವ ಹಾಗೂ ತತ್ವಬದ್ಧ ನಾಯಕತ್ವ ಇನ್ನಷ್ಟು ಬಲ ತುಂಬಲಿ ಎಂದು ಹಾರೈಸಿ, ಅವರಿಗೆ ಉತ್ತಮ ಆರೋಗ್ಯ, ಶಕ್ತಿ ಮತ್ತು ರಾಷ್ಟ್ರಸೇವೆಯಲ್ಲಿ ನಿರಂತರ ಯಶಸ್ಸು ದೊರೆಯಲಿ ಎಂದು ಶುಭಾಶಯ ಕೋರಲಾಯಿತು.

ಈ ಸಂದರ್ಭದಲ್ಲಿ ಶರಣ್ ಪ್ರಕಾಶ್ ಪಾಟೀಲ್ , ಹಂಪನಗೌಡ ಬದರ್ಲಿ , . ವಸಂತ್ ಕುಮಾರ್

3ನೇ ಪುಟ.....

ಸಾರ್ವಜನಿಕರು ಸಹಕಾರ ನೀಡಲು ಜಿಲ್ಲಾಧಿಕಾರಿ ಪೂವಿತಾ ಎಸ್. ಮನವಿ

ರಾಯಚೂರು,ಜೂ.30-

ದಿನಾಂಕ: 01.07.2026 ರಂದು ರಾಯಚೂರು ನಗರದ ಡಾ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಪ್ರಸ್ತುತ ಪುತ್ಥಳಿಯನ್ನು ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗಳ ನಿಮಿತ್ತ ತಾತ್ಕಾಲಿಕವಾಗಿ ತೆರವುಗೊಳಿಸಲಾಗುತ್ತಿದೆ.

ರಾಯಚೂರು ನಗರದ ಡಾ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಪ್ರಸ್ತುತ ಪುತ್ಥಳಿಯ ನವೀಕರಣ ಹಾಗೂ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಉದ್ದೇಶದಿಂದ, ದಿನಾಂಕ: 01.07.2026 ರಂದುಬೆಳಿಗ್ಗೆ 6 ಗಂಟೆಗೆ ಸದರಿ ಪುತ್ಥಳಿಯನ್ನು ತಾತ್ಕಾಲಿಕವಾಗಿ ತೆರವುಗೊಳಿಸಲಾಗುವುದು.



ಸದರಿ ಕಾಮಗಾರಿಗಳನ್ನು ಸಾರ್ವಜನಿಕರ ಅನುಕೂಲತೆ ಹಾಗೂ ಸ್ಥಳದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳಲಾಗುತ್ತಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ನಿಯಮಾನುಸಾರ ಪುನಃ ಪುತ್ಥಳಿಯನ್ನು ಸ್ಥಾಪಿಸಲಾಗುವುದು.

ಆದ್ದರಿಂದ, ಸಾರ್ವಜನಿಕರು ಈ ಕುರಿತು ಸಹಕಾರ ನೀಡುವಂತೆ ಹಾಗೂ ಕಾಮಗಾರಿ ಅವಧಿಯಲ್ಲಿ ಅನಗತ್ಯ ಗೊಂದಲ ಅಥವಾ ವದಂತಿಗಳಿಗೆ ಅವಕಾಶ

3ನೇ ಪುಟ.....

ಜಿಲ್ಲೆಗೆ ನಾಲ್ಕು ಸಚಿವ ಸ್ಥಾನ ನೀಡಲು ಕಾಂಗ್ರೆಸ್ ಹೈಕಮಾಂಡ್ ಗೆ ಒತ್ತಾಯ

ರಾಯಚೂರು,ಜೂ.30-

ರಾಯಚೂರು ಜಿಲ್ಲೆಯಿಂದ ನಾಲ್ವರು ಶಾಸಕರು ಹಾಗೂ ಮೂವರು ವಿಧಾನ ಪರಿಷತ್ ಸದಸ್ಯರು ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸುತ್ತಿರುವ ಹಿನ್ನೆಲೆಯಲ್ಲಿ, ಜಿಲ್ಲೆಗೆ ನಾಲ್ಕು ಸಚಿವ ಸ್ಥಾನಗಳನ್ನು ನೀಡುವಂತೆ ಕಾಂಗ್ರೆಸ್ ಹೈಕಮಾಂಡ್, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಗಳು ತೀರ್ಮಾನ ಕೈಗೊಳ್ಳಬೇಕು ಎಂದು ಮಾಜಿ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮಾಜಿ ನಗರಸಭೆ ಸದಸ್ಯ ವಿ. ಲಕ್ಷ್ಮಿ ರೆಡ್ಡಿ ಆಗ್ರಹಿಸಿದರು.



ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಸುಮಾರು 30 ವರ್ಷಗಳಿಂದ ತಾವು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿದ್ದು, ಜಿಲ್ಲೆಯ ಹಲವು ನಾಯಕರು ಪಕ್ಷ ಸಂಘಟನೆ ಹಾಗೂ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಹೇಳಿದರು.

ಜಿಲ್ಲೆಯ ಹಿರಿಯ ನಾಯಕರಿಗೆ ಸಚಿವ ಸ್ಥಾನ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಜವಾಬ್ದಾರಿ ನೀಡಬೇಕು. ಅವರು ಪಕ್ಷ ಸಂಘಟನೆ ಬಲಪಡಿಸುವುದರ ಜೊತೆಗೆ ವಿವಿಧ ಸಮುದಾಯಗಳನ್ನು ಪಕ್ಷದತ್ತ ಸೆಳೆಯುವ ಸಾಮರ್ಥ್ಯ ಹೊಂದಿದ್ದು, ಜಿಲ್ಲೆಯ ಅಭಿವೃದ್ಧಿಗೆ ಪರಿಣಾಮಕಾರಿ ನಾಯಕತ್ವ ನೀಡಬಲ್ಲರು ಎಂದು ಅಭಿಪ್ರಾಯಪಟ್ಟರು.

ಅದೇ ರೀತಿ, ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾಗಿರುವ ನಾಯಕರಿಗೂ ಸಚಿವ ಸ್ಥಾನ ನೀಡಬೇಕು. ಅವರು ನಗರಸಭೆ ಸದಸ್ಯರು, ಗ್ರಾಮೀಣ ಬ್ಲಾಕ್ ಅಧ್ಯಕ್ಷರು, ಆರ್‌ಡಿಎ ಅಧ್ಯಕ್ಷರು, ರಾಜ್ಯ ಕಾರ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಾಗಿ ಸೇವೆ ಸಲ್ಲಿಸಿ ಪಕ್ಷ ಸಂಘಟನೆಗೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಿಂದ ಇಬ್ಬರು ಶಾಸಕರು

3ನೇ ಪುಟ.....

ಲಿಂಗಸ್ಗೂರು: ವಸತಿ ಮತ್ತು ನಿವೇಶನಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ, ಮನವಿ ಸಲ್ಲಿಕೆ

ಲಿಂಗಸೂಗರು,ಜೂ.30-

ತಾಲೂಕಿನ ಕೊಠಾ ಗ್ರಾಮ ಪಂಚಾಯತಿ ಹಾಗೂ ಹಟ್ಟಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿನ ನೈಜ ಅರ್ಹ ಫಲಾನುಭವಿಗಳಿಗೆ ತಕ್ಷಣವೇ ವಸತಿ ಮತ್ತು ನಿವೇಶನ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿ, ಕರ್ನಾಟಕ ಪ್ರಾಂತ ರೈತ ಸಂಘ () ಲಿಂಗಸ್ಗೂರು ತಾಲೂಕು ಸಮಿತಿ ವತಿಯಿಂದ ಇಂದು ಹಟ್ಟಿ ಪಟ್ಟಣ ಪಂಚಾಯತಿ ಮತ್ತು ಕೊಠಾ ಗ್ರಾಮ ಪಂಚಾಯತಿ ಮುಖ್ಯಾಧಿಕಾರಿಗಳಿಗೆ ಬೃಹತ್ ಪ್ರತಿಭಟನೆಯ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು.



ಹಕ್ಕೊತ್ತಾಯಗಳ

ಸಮಾಜದ ಅತ್ಯಂತ ಹಿಂದುಳಿದ ಮತ್ತು ನೊಂದ ವರ್ಗಗಳಿಗೆ ಸರ್ಕಾರದ ವಸತಿ ಯೋಜನೆಗಳು ತಲುಪುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಈ ಕೆಳಗಿನ ಅರ್ಹರಿಗೆ ಆದ್ಯತೆಯ ಮೇರೆಗೆ ಮನೆ ಮತ್ತು ನಿವೇಶನ ನೀಡಬೇಕೆಂದು ಒತ್ತಾಯಿಸಿದರು: ಬಡ ಕೂಲಿಕಾರರು ಹಾಗೂ ಬಡ ರೈತರು ಒಂಟಿ ಮಹಿಳೆಯರು, ವಿಧವೆಯರು ಮತ್ತು ವಿದುರರು ವಿಕಲಚೇತನರು ಹಾಗೂ ನಿರಾಶ್ರಿತರು ಇದುವರೆಗೆ ಯಾವುದೇ ಸರ್ಕಾರಿ ಯೋಜನೆಯಡಿ ಅನುದಾನ ಅಥವಾ ಆಶ್ರಯ ಪಡೆಯದ ನೈಜ ವಸತಿ ರಹಿತರು ಮುಖಂಡರ ಆಕ್ರೋಶ ಮತ್ತು ಎಚ್ಚರಿಕೆ:

ಇದೇ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ಪ್ರಮುಖರು, ಹಲವು ವರ್ಷಗಳಿಂದ ವಸತಿ ಮತ್ತು ನಿವೇಶನವಿಲ್ಲದೆ ಬಡವರು, ಕೂಲಿಕಾರರು ಬಾಡಿಗೆ ಮನೆಗಳಲ್ಲಿ ಹಾಗೂ ಗುಡಿಸಲುಗಳಲ್ಲಿ ನರಕಯಾತನೆ ಅನುಭವಿಸುತ್ತಿದ್ದಾರೆ. ಸರ್ಕಾರಿ ಯೋಜನೆಗಳು ಕೇವಲ ಕಾಗದದ ಮೇಲಿದ್ದು, ಅರ್ಹರಿಗೆ ತಲುಪುತ್ತಿಲ್ಲ. ತಕ್ಷಣವೇ ಅಧಿಕಾರಿಗಳು

3ನೇ ಪುಟ.....


ರಾಜ್ಯವ್ಯಾಪಿ ಹೋರಾಟಕ್ಕೆ ಯುವ ನಾಯಕತ್ವ ಅಗತ್ಯ -ಯಂಕಪ್ಪ ಪಿರಂಗಿ

ರಾಯಚೂರು,ಜೂ.30-

ಸಂಘಟನೆಗಳ ಬಲವರ್ಧನೆಗೆ ಯುವಕರ ಸಕ್ರಿಯ ಭಾಗವಹಿಸುವಿಕೆ ಹಾಗೂ ಸಮರ್ಪಿತ ನಾಯಕತ್ವ ಅಗತ್ಯವಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯವ್ಯಾಪಿ ಹೋರಾಟಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಯುವ ಪೀಳಿಗೆಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್ 1 ದೈಹಿಕ ಶಿಕ್ಷಣ ಶಿಕ್ಷಕರ ಸಂಘ(ರಿ) ಜಿಲ್ಲಾ ಅಧ್ಯಕ್ಷ ಯಂಕಪ್ಪ ಪಿರಂಗಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್1 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಭೆಯ ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಸುಜೀತ್ ಆನಂದ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘದ ಇದುವರೆಗಿನ ಚಟುವಟಿಕೆಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ವಿವರಿಸಿದರು. ನೂತನ ಜಿಲ್ಲಾ ಗೌರವಾಧ್ಯಕ್ಷರಾಗಿ ಆಯ್ಕೆಯಾದ ಎನ್.ಎಚ್. ಬಾಷ ಮಾತನಾಡಿ, ಜಿಲ್ಲೆಯ ಸಂಘಟನೆಯನ್ನು ಸಮರ್ಥವಾಗಿ ಮುನ್ನಡೆಸುವ ಸಾಮರ್ಥ್ಯ ಇಂದಿನ ಜಿಲ್ಲಾಧ್ಯಕ್ಷರಿಗೆ ಇದ್ದು, ಎಲ್ಲ ಸದಸ್ಯರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಸಂಘವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದು ಕರೆ ನೀಡಿದರು.



ಜಿಲ್ಲಾ ತಾಂತ್ರಿಕ ನಿರ್ದೇಶಕರಾಗಿ ಆಯ್ಕೆಯಾದ ಉಮೇಶ್ ಎಸ್ ಮಾತನಾಡಿ, ಸಂಘಟನೆ ಕಟ್ಟುವುದು ಸುಲಭದ ಕೆಲಸವಲ್ಲ. ವೈಯಕ್ತಿಕ ಜೀವನ ಮತ್ತು ಕುಟುಂಬದ ಜವಾಬ್ದಾರಿಗಳ ನಡುವೆಯೂ ಸಂಘಟನೆಗಾಗಿ ದುಡಿಯುವುದು ಸವಾಲಿನ ಕೆಲಸವಾಗಿದ್ದು, ಸದಸ್ಯರ ಸಹಕಾರ ಅಗತ್ಯ ಎಂದರು. ಜಿಲ್ಲಾಧ್ಯಕ್ಷ ಯಂಕಪ್ಪ ಪಿರಂಗಿ ಮಾತನಾಡಿ, ರಾಜ್ಯಾಧ್ಯಕ್ಷರ ಮಾರ್ಗದರ್ಶನದಂತೆ ರಾಯಚೂರು ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

3ನೇ ಪುಟ.....

ಮಕ್ಕಳಿಗೆ ಪಲ್ಸ್ ಪೊಲಿಯೊ ಲಸಿಕೆ ಹಾಕಿಸಿ -ಸಾಗರ ಖಂಡ್ರೆ



ಬೀದರ, ಜೂ.30–

ಪೋಲಿಯೋ ಕಾಯಿಲೆ ತಡೆಗಟ್ಟಲು ಪೋಲಿಯೋ ಹನಿಯೇ ಅತ್ಯಂತ ಪ್ರಮುಖವಾಗಿದೆ. 0-5 ವರ್ಷ ಒಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ಬೀದರ ಲೋಕಸಭಾ ಸದಸ್ಯರಾದ ಸಾಗರ ಖಂಡ್ರೆ ಅವರು ಹೇಳಿದರು.

ಬೀದರ ನಗರದ 2026ರ ಜೂನ್ 28 ರಂದು ವಿಸ್ಡಮ್ ಶಾಲೆ ಸಿದ್ದಿ ತಾಲಿಂ ಓಲ್ಡ್ ಸಿಟಿ ಬೀದರದಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಮಕ್ಕಳಿಗೆ ಲಸಿಕೆ ಹಾಕಿಸಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತದಲ್ಲಿ ಕೊನೆಯ ಪೋಲಿಯೋ ಪ್ರಕರಣ 2011ರಲ್ಲಿ ಪಶ್ಚಿಮ ಬಂಗಾಳದಲ್ಲಿ ವರದಿಯಾಗಿತ್ತು ಅದಾದಮೇಲೆ 15 ವರ್ಷಗಳಿಂದ ಯಾವುದೇ ಪೋಲಿಯೋ ಪ್ರಕರಣಗಳು ಭಾರತದಲ್ಲಿ ಕಂಡುಬಂದಿರುವುದಿಲ್ಲ. ನಮ್ಮ ನೆರೆ ದೇಶಗಳಾದ ಪಾಕಿಸ್ತಾನ ಹಾಗೂ ಅಫಘಾನಿಸ್ತಾನದಲ್ಲಿ ಇನ್ನೂ ಪಾಜಿಟಿವ್ ಪ್ರಕರಣಗಳಿದ್ದುದರಿಂದ ನಮ್ಮ ದೇಶದಲ್ಲಿ ಮುಂಜಾಗೃತೆ ಕ್ರಮಕ್ಕಾಗಿ ಪ್ರತಿ ವರ್ಷ ಪಲ್ಸ್ ಪೋಲಿಯೋ ಕಾರ್ಯಕ್ರಮ ಪೋಲಿಯೋ ಕಾಯಿಲೆ ತಡೆಗಟ್ಟಲು ಪೋಲಿಯೋ ಹನಿಯೇ ಅತ್ಯಂತ ಪ್ರಮುಖವಾಗಿದೆ. 0-5 ವರ್ಷ ಒಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿಕೊಳ್ಳುವಂತೆ ಪಾಲಕರಲ್ಲಿ ಮನವಿ ಮಾಡಿದರು.

ಜಿಲ್ಲಾಧಿಕಾರಿಗಳು ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಮಾತನಾಡಿ, ಭಾರತ 2014ರಲ್ಲಿ ಪೋಲಿಯೋ ಮುಕ್ತ ದೇಶವಾಗಿರುತ್ತದೆ, ಇದೇ ಸ್ಥಿತಿ ಮುಂದುವರೆಯುವದಕ್ಕಾಗಿ ನಮ್ಮ ದೇಶ, ರಾಜ್ಯ ಹಾಗೂ ಜಿಲ್ಲೆಯಲ್ಲಿ ಪೋಲಿಯೋ ಪ್ರಕರಣ ಬರದಂತೆ ಕಡ್ಡಾಯವಾಗಿ ತಮ್ಮ ಹತ್ತಿರದ ಬೂತ್‌ಗೆ 0-5 ವರ್ಷದೊಳಗಿನ ಮಕ್ಕಳಿಗೆ ಕರೆತಂದು ಪೋಲಿಯೋಲಸಿಕೆ ಹಾಕಿಸುವಂತೆ ಪೋಷಕರಿಗೆ ತಿಳಿಸಿದರು.

ಬೀದರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಧ್ಯಾನೇಶ್ವರ ನೀರಗುಡೆ ಅವರು ಮಾತನಾಡಿ, 2026ರ ಜೂನ್ 28 ರಂದು ಬೂತ್‌ಗಳ ಮೂಲಕ ಲಸಿಕೆ ನೀಡಲಾಗುವುದು ಹಾಗೂ 2026ರ ಜೂನ್ 29 ರಿಂದ ಜುಲೈ 1ರ ವರೆಗೆ ಮನೇ ಭೇಟಿಗಳ ಮೂಲಕ ಬಿಟ್ಟು ಹೋದ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲಾಗುವುದು ಆದಪ್ರಯುಕ್ತ 0-5 ವರ್ಷದ 2,13,213 (ಗ್ರಾಮೀಣ ಮತ್ತು ನಗರ ಪ್ರದೇಶ ಸೇರಿ) ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ 996 ಬೂತ್‌ಗಳು ನಿರ್ಮಿಸಲಾಗಿದ್ದು ಅಲ್ಲದೇ 2154 ಲಸಿಕೆದಾರರನ್ನು ಹಾಗೂ 216 ಜನರನ್ನು ಬೂತ್ ಮೇಲ್ವಿ ಚಾರಣೆಗಾಗಿ ಸಿಬ್ಬಂದಿಯವರನ್ನು ನೇಮಿಸಲಾಗಿದೆ 11 ಮೊಬೈಲ್ ತಂಡಗಳು ಹಾಗೂ 70-ಟ್ರಾನ್ಸಿ ಟ್ ಪಾಯಿಂಟ್ಸ್ ಗಳ ಮೂಲಕ ಪ್ರತಿಶತ ಲಸಿಕಾಕರಣ ಗುರಿ ಸಾಧಿಸಲಾಗುವುದೆಂದು ಹೇಳಿದರು.

ಬೀದರ ವಿಸ್ಡಮ್ ಶಾಲೆ ಅಧ್ಯಕ್ಷರು ಎಂ.ಡಿ. ಆಸಿಫೋದಿನ್ ಅವರು ಮಾತನಾಡಿ, ನಮ್ಮ ಶಾಲೆಯಲ್ಲಿ ಈ ಕಾರ್ಯಕ್ರಮ ಮಾಡಿರುವುದಕ್ಕಾಗಿ ನಮ್ಮ ಸಮಿತಿಯವರಿಗೆ ಸಂತೋಷ ತಂದಿದೆ. ಈ ಕಾರ್ಯಕ್ರಮ ಶತ ಪ್ರತಿಶತ ಪ್ರಗತಿ ಸಾಧಿಸುವಲ್ಲಿ ಹಾಗೂ ಈ ಕಾರ್ಯಕ್ರಮ ಸಮುದಾಯಕ್ಕೆ ಮುಟ್ಟಿಸುವಲ್ಲಿ ಫಲಾನುಭವಿಗಳಿಗೆ ತಲುಪಿಸುವಲ್ಲಿ ನಮ್ಮ ಶಾಲೆಯ ಸಂಪೂರ್ಣ ಸಹಕಾರವಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಬೀದರ ಜಿಲ್ಲಾ ನೋಡಲ್ ಅಧಿಕಾರಿಗಳಾದ ಡಾ.ಇಂದುಮತಿ ಪಾಟೀಲ ಉಪ ನಿರ್ದೇಶಕರು (ಆರ್.ಬಿ.ಎಸ್.ಕೆ) ಆರೋಗ್ಯ ಕು.ಕ ಸೇವೆಗಳ ನಿರ್ದೇಶನಾಲಯ ಬೆಂಗಳೂರು ಸಲಾವುದಿನ್ ಕಾರ್ಯದರ್ಶಿಗಳು ವಿಸ್ಡಮ್ ಶಾಲೆ, ಎಂ.ಡಿ.ಗೌಸ್ ಚೇರಮೇನ ಸಿ.ಎಂ.ಸಿ. ಬೀದರ, ಸಿ.ಎಂ.ಸಿ. ವಾರ್ಡ ಕೌನ್ಸೆ ಲರ್‌ಗಳಾದ ಚೇತನಾ ಮೋಹನ, ಎಂ.ಡಿ. ಕಲೀಫ್, ಡಾ.ಶಿವಶಂಕರ.ಬಿ. ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಬೀದರ, ಡಾ.ರಾಜಶೇಖರ ಪಾಟೀಲ ಜಿಲ್ಲಾ ಮಲೇರಿಯಾ ನಿಯಂತ್ರಣ ಅಧಿಕಾರಿ ಡಾ.ಅನೀಲ ಚಿಂತಾಮಣಿ ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ ಡಾ.ಕಿರಣ ಪಾಟೀಲ ಜಿಲ್ಲಾ ಕುಷ್ಠರೋಗ ನಿಯಂತ್ರಣ ಅಧಿಕಾರಿ ಬೀದರ, ಡಾ.ಎಸ್.ಕೆ.ಬೊಮ್ಮಾ ಜಿಲ್ಲಾ ಸರ್ವೇಕ್ಷಣಾಧಿಕಾರಿ ಬೀದರ, ಡಾ.ಸಂಗಾರೆಡ್ಡಿ ತಾಲೂಕಾ ಅಧಿಕಾರಿ ಬೀದರ, ಡಾ.ಎಂ.ಡಿ.ಸೋಹೆಲ್ ಆಡಳಿತ ವೈದ್ಯಾಧಿಕಾರಿ 100 ಹಾಸಿಗೆ ಆಸ್ಪತ್ರೆ ಬೀದರ, ಶಶಿಕಲಾ.ಬಿ. ಸಿನ್ನೂರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬೀದರ, ಸಾವಿತ್ರಿಬಾಯಿ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಶೇಖರ ಇಜಾರೆ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಓಂಕಾರ ಮಲ್ಲಿಗೆ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬೀದರ, ಉಮೇಶ ಬಿರಾದರ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಲೋಕೇಶ ಸಲಗರ ಲಸಿಕಾ ಮೇಲ್ವಿಚಾರಕರು, ದೇವಿದಾಸ, ತಾರಾದೇವಿ, ವಿನಾಯಕ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಗುರುನಾಥ, ರವಿ ಶೆಂಬೆಳ್ಳಿ, ಚನ್ನಬಸವ, ಸತೀಶ ಬಿರಾದರ ಮುಂತಾದ ಅಧಿಕಾರಿ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಟಿ.ಎಂ.ಮಚ್ಚೆ ಸ್ವಾಗತಿಸಿದರು ಹಾಗೂ ಕಾರ್ಯಕ್ರಮ ನಿರೂಪಿಸಿದರು.

ಆತ್ಮ ಯೋಜನೆಯ ಕೊಪ್ಪಳ ತಾಲೂಕಾ ಮಟ್ಟದ ರೈತ ಸಲಹಾ ಸಮಿತಿ ಸಭೆ



ಕೊಪ್ಪಳ,ಜೂ.30–

2026-27ನೇ ಸಾಲಿನ ಆತ್ಮ ಯೋಜನೆಯಡಿ ಕೊಪ್ಪಳ ತಾಲೂಕ ಮಟ್ಟದ ರೈತ ಸಲಹಾ ಸಮಿತಿ ಸಭೆಯು ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಇತ್ತೀಚೆಗೆ (ಜೂ. 25ರಂದು) ಜರುಗಿತು.

ಕೊಪ್ಪಳ ತಾಲೂಕಾ ಮಟ್ಟದ ರೈತ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸಹಾಯಕ ಕೃಷಿ ನಿರ್ದೇಶಕರಾದ ಜೀವನಸಾಬ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಭೆಯಲ್ಲಿ ಎಲ್ಲಾ ಇಲಾಖೆಯ ತಾಲೂಕಾ ಅಧಿಕಾರಿಗಳು ಮತ್ತು ರೈತ ಸಲಹಾ ಸಮಿತಿಯ ಸದಸ್ಯರು ರೈತ ಭಾಂದವರು ಆತ್ಮ ಯೋಜನೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ತಾಲೂಕಾ ತಾಂತ್ರಿಕ ವ್ಯವಸ್ಥಾಪಕ ಯಮನೂರಪ್ಪ ಅವರು ಸಭೆಯಲ್ಲಿ ಭಾಗವಹಿಸಿದ ಸರ್ವರಿಗೂ ಸ್ವಾಗತಿಸಿದರು. ಆತ್ಮ ಯೋಜನೆ ಯ ಬಗ್ಗೆ ಕಾರ್ಯಕ್ರಮ ತರಬೇತಿ ಬಗ್ಗೆ ಪ್ರಾಸ್ತಾವಿಕವಾಗಿ ಡಿ.ಪಿ.ಡಿ ಕೊಪ್ಪಳ ಶಿವಪ್ಪ ನಾಯಕ ಅವರು ಮಾತನಾಡಿದರು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇ ಶಕರಾದ ರವೀಂದ್ರ ಅವರು ಇಲಾ ಖೆಯ ಪ್ರಯೋಜನೆಗಳನ್ನು ತಿಳಿಸಿದರು.

ರೇಷ್ಮ ಇಲಾಖೆಯ ಪ್ರಸಾದ ಎತ್ತಿನಮಠ ಅವರು ತಮ್ಮ ಇಲಾಖೆಯ ಮೂಲಕ ಇರುವ ಸರ್ಕಾರದ ಸೌಲಭ್ಯ ಸದಪಯೋಗ ಮಾಡಿಕೊಳ್ಳಲು ರೈತರಿಗೆ ತಿಳಿಸಿದರು. ಅರಣ್ಯ ಇಲಾಖೆಯ ಗುಂಡಪ್ಪ ಅವರು, ಸರ್ಕಾರದ ಯೋಜನೆಗಳ ಬಗ್ಗೆ ವಿವರವಾಗಿ ತಿಳಿಸಿದರು. ಪಶು ಸಂಗೋಪನೆ ಇಲಾಖೆಯ ಅಧಿಕಾರಿ ಗೋಣೆಪ್ಪ ವಾಡಿ ಅವರು, ರೈತರನ್ನು ಉದ್ದೇಶಿಸಿ ಮಾತನಾಡಿದರು. ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಾದ ಬಸವರಾಜ ಪಾಟೀಲ ಮಾತನಾಡಿದರು.

ಕೊನೆಯದಾಗಿ ಅಧ್ಯಕ್ಷರಾದ ಜೀವನಸಾಬ ಅವರು, ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಖೆತ್ ಬಚಾವೂ ಅಭಿಯಾನದ ಬಗ್ಗೆ ರೈತರಿಗೆ ಮನವರಿಕೆ ಮಾಡಿ, ಸಾವಯವ ಕೃಷಿ, ನೈಸರ್ಗಿಕ ಕೃಷಿ ಮತ್ತು ಸಿರಿಧಾನ್ಯಗಳ ವಿವರವಾಗಿ ತಿಳಿಸುತ್ತಾ, ರಾಸಾ ಯನಿಕ ರಸಗೊಬ್ಬರ ಬಳಿಕೆ ಕಡಿಮೆ ಮಾಡಿ ಬೆಳೆಗಳನ್ನು ಬೆಳೆಯುವಂತೆ ರೈತರಿಗೆ ಕರೆ ನೀಡಿದರು. ತಾಲೂಕಾ ತಾಂತ್ರಿಕ ವ್ಯವ ಸ್ಥಾಪಕರು ಸಭೆಯಲ್ಲಿ ಪಾಲ್ಗೊಂಡ ಎಲ್ಲ ಇಲಾಖೆಯ ಅಧಿಕಾರಿಗಳಿಗೆ, ರೈತರಿಗೆ ವಂದಿಸಿದರು.



ಕೊಪ್ಪಳ:ವಿಕಸಿತ ಭಾರತ ಗ್ಯಾರಂಟಿ ರೋಜಗಾರ್ ಅಜೀವಿಕ ಮಿಷನ್(ಗ್ರಾ);ತರಬೇತಿ ಕಾರ್ಯಾಗಾರ

ಕೊಪ್ಪಳ,ಜೂ.30–

ವಿಕಸಿತ ಭಾರತ ಗ್ಯಾರಂಟಿ ರೋಜಗಾರ್ ಮತ್ತು ಅಜೀವಿಕ ಮಿಷನ್ (ಗ್ರಾಮೀಣ) ಕುರಿತು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕೊಪ್ಪಳ ತಾಲೂಕಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ (ಜೂ. 29 ರಂದು) ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಜುಲೈ 1 ರಿಂದ ದೇಶದಾದ್ಯಂತ ಜಾರಿಯಾಗಲಿರುವ ವಿಬಿ-ಜಿ ರಾಮ್ ಜಿ ಯೋಜನೆನ್ನು ಅನುಷ್ಠಾನಿಸುವ ಕುರಿತಾಗಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ಕೊಪ್ಪಳ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ,

ಕಾರಟಗಿ ತಾ.ಪಂ (ಗ್ರಾ.ಉ) ಸಹಾಯಕ ನಿರ್ದೇಶಕರಾದ ವೈ.ವನಜಾ, ಕುಷ್ಟಗಿ ತಾ.ಪಂ (ಗ್ರಾ.ಉ) ಸಹಾಯಕ ನಿರ್ದೇಶಕರಾದ ನಿಂಗನಗೌಡ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಂಶೀರ್ ಅಲಿ ಅವರು ಈ ತರಬೇತಿಯಲ್ಲಿ ಯೋಜನೆ ಕಾರ್ಯವೈಖರಿ ವಿಧಾನಗಳ ಕುರಿತು ಪಿಪಿಟಿ ಮುಖಾಂತರ ಮಾಹಿತಿ ವಿವರಿಸಿದರು.

ತರಬೇತಿಯಲ್ಲಿ ಅನುಷ್ಠಾನ ಇಲಾಖೆಗಳಾದ ಕೃಷಿ, ಅರಣ್ಯ, ತೋಟಗಾರಿಕೆ, ರೇಷ್ಮೆ, ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಜಿಲ್ಲಾ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ತಾ.ಪಂ ವಿವಿಧ ವಿಭಾಗಗಳ ಸಹಾಯಕ ನಿರ್ದೇ ಶಕರು, ಜಿಲ್ಲಾ ಪಂಚಾಯತ್ ಎಡಿಪಿಸಿ, ಜಿಲ್ಲಾ ಐಇಸಿ ಸಂಯೋಜಕರು, ಪಂಚಾ ಯತ ಅಭಿವೃದ್ಧಿ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಮತ್ತು ತಾಲೂಕಾ ಪಂಚಾಯತಿಯ ನರೇಗಾ ಸಿಬ್ಬಂದಿಗಳು, ತಾಂತ್ರಿಕ ಸಹಾಯಕರುಗಳು (ಗ್ರಾಮ ಪಂಚಾಯತ ಅನುಷ್ಠಾನ ಇಲಾಖೆ), ಕಂಪ್ಯೂಟರ್ ಆಪರೇಟರ್‌ಗಳು, ಬಿ.ಎಫ್.ಟಿಗಳು, ಗ್ರಾಮ ಕಾಯಕ ಮಿತ್ರರು ಹಾಜರಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಬೂತ್ ದಿನದಂದು ಶೇ.97.3 ರಷ್ಟು ಪ್ರಗತಿ: ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು



ಬಳ್ಳಾರಿ,ಜೂ.30–

ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜೂನ್ 28ರ ಪೋಲಿಯೋ ಭಾನುವಾರದಂದು ಬಳ್ಳಾರಿ ಜಿಲ್ಲೆಯಲ್ಲಿ ಮೊದಲ ದಿನವೇ ಶೇಕಡಾ 97.3 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ತಿಳಿಸಿದ್ದಾರೆ.

ಜಿಲ್ಲೆಯ ಬಳ್ಳಾರಿ, ಸಂಡೂರು, ಸಿರುಗುಪ್ಪ, ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಬೂತ್ ದಿನದಂದು, 5 ವರ್ಷದೊಳಗಿನ ಒಟ್ಟು 1,99,934 ಮಕ್ಕಳ ಗುರಿಯಲ್ಲಿ 1,94,579 ಮಕ್ಕಳಿಗೆ ಯಶಸ್ವಿಯಾಗಿ ಲಸಿಕೆ ಹಾಕಲಾಗಿದೆ. ಉಳಿದಿರುವ 5,355 ಮಕ್ಕಳಿಗೆ ಜುಲೈ 1 ರವರೆಗೆ ನಡೆಯಲಿರುವ ಮನೆ-ಮನೆ ಲಸಿಕಾ ಕಾರ್ಯಕ್ರಮದಲ್ಲಿ ಪೋಲಿಯೋ ಹನಿಗಳನ್ನು ಹಾಕಲಾಗುವುದು ಎಂದು ಅವರು ತಿಳಿಸಿದ್ದಾರೆ.

ತಾಲ್ಲೂಕುವಾರು ಲಸಿಕಾ ಪ್ರಗತಿ ವಿವರ: ಬಳ್ಳಾರಿ: 95,879- ಲಸಿಕಾ ಗುರಿ, 91,990-ಸಾಧನೆ (ಮಕ್ಕಳ ಸಂಖ್ಯೆ), ಶೇ.95.9-ಪ್ರಗತಿ.

ಕಂಪ್ಲಿ: 14,627-ಲಸಿಕಾ ಗುರಿ, 14,921-ಸಾಧನೆ(ಮಕ್ಕಳ ಸಂಖ್ಯೆ), ಶೇ.102-ಪ್ರಗತಿ.

ಕುರುಗೋಡು: 17,241-ಲಸಿಕಾ ಗುರಿ, 17,062-ಸಾಧನೆ (ಮಕ್ಕಳ ಸಂಖ್ಯೆ), ಶೇ.99-ಪ್ರಗತಿ. ಸಂಡೂರು: 35,818-ಲಸಿಕಾ ಗುರಿ, 34,993-ಸಾಧನೆ(ಮಕ್ಕಳ ಸಂಖ್ಯೆ), ಶೇ.98.8-ಪ್ರಗತಿ.

ಸಿರುಗುಪ್ಪ: 36,369-ಲಸಿಕಾ ಗುರಿ, 35,613-ಸಾಧನೆ(ಮಕ್ಕಳ ಸಂಖ್ಯೆ), ಶೇ.97.9-ಪ್ರಗತಿ.

ಒಟ್ಟು: 1,99,934-ಲಸಿಕಾ ಗುರಿ, 1,94,579-ಸಾಧನೆ(ಮಕ್ಕಳ ಸಂಖ್ಯೆ), ಶೇ.97.3-ಪ್ರಗತಿ.

ಕಂಪ್ಲಿಯಲ್ಲಿ ಗುರಿ ಮೀರಿದ ಸಾಧನೆ: ವಿಶೇಷವೆಂದರೆ, ಜಿಲ್ಲೆಯ ಕಂಪ್ಲಿ ತಾಲ್ಲೂಕಿನಲ್ಲಿ ನಿಗದಿಪಡಿಸಿದ್ದ ಗುರಿಗಿಂತಲೂ ಹೆಚ್ಚು ಅಂದರೆ ಶೇ.102 ರಷ್ಟು ಮಕ್ಕಳಿಗೆ ಲಸಿಕೆ ನೀಡುವ ಮೂಲಕ ದಾಖಲೆಯ ಸಾಧನೆ ಮಾಡಲಾಗಿದೆ. ಕುರುಗೋಡು ಹಾಗೂ ಸಂಡೂರು ತಾಲ್ಲೂಕುಗಳು ಸಹ ಕ್ರಮವಾಗಿ ಶೇ.99 ಹಾಗೂ ಶೇ. 98.8 ರಷ್ಟು ಪ್ರಗತಿ ಸಾಧಿಸಿ ಮುಂಚೂಣಿಯಲ್ಲಿವೆ.

ವ್ಯಾಪಕ ಸಿದ್ಧತೆ ಮತ್ತು ತಂಡಗಳ ಕಾರ್ಯವೈಖರಿ: ಜಿಲ್ಲೆಯಾದ್ಯಂತ ಯಾವುದೇ ಮಗು ಲಸಿಕೆಯಿಂದ ವಂಚಿತವಾಗಬಾರದು ಎಂಬ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ವ್ಯಾಪಕ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ಜಿಲ್ಲೆಯಲ್ಲಿ 335 ಕ್ಲಿಷ್ಟಕರ ಪ್ರದೇಶ ಗಳನ್ನು ಗುರುತಿಸಿ, ಅಲ್ಲಿ ಲಸಿಕೆ ಹಾಕಲು 236 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಒಟ್ಟು 977 ಬೂತ್‌ಗಳು ಹಾಗೂ 615 ಮನೆ ಭೇಟಿ ತಂಡಗಳು ಕಾರ್ಯನಿರ್ವಹಿಸಿದವು. ಸಂತೆ, ಮಾರುಕಟ್ಟೆ, ಬಸ್ ನಿಲ್ದಾಣಗಳಂತಹ ಜನನಿಬಿಡ ಪ್ರದೇಶಗಳಿಗಾಗಿ 50 ತಂಡಗಳನ್ನು ಹಾಗೂ ಇಟ್ಟಿಗೆ ಭಟ್ಟಿ, ಕಟ್ಟಡ ಕಾಮಗಾರಿ ಪ್ರದೇಶ, ಕಬ್ಬು ಕಡಿಯುವ ಸ್ಥಳ ಮತ್ತು ಕುರಿಹಟ್ಟಿಗಳಂತಹ ವಲಸೆ ಕಾರ್ಮಿಕರ ಪ್ರದೇಶಗಳಿಗಾಗಿ 15 ಸಂಚಾರಿ (ಮೊಬೈಲ್) ತಂಡಗಳನ್ನು ನಿಯೋಜಿಸಲಾಗಿತ್ತು.

ಈ ಬೃಹತ್ ಅಭಿಯಾನದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರು ವ್ಯಾಕ್ಸಿ ನೇಟರ್‌ಗಳಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಇವರ ಕಾರ್ಯದ ಉಸ್ತುವಾರಿಗಾಗಿ 188 ಮೇಲ್ವಿಚಾರಕರು ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ನೋಡಲ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ, ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಈ ಮೈಲಿಗಲ್ಲು ತಲುಪಲು ಸಾಧ್ಯವಾಗಿದೆ. ಈ ಯಶಸ್ಸಿಗೆ ಶ್ರಮಿಸಿದ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿ ಹಾಗೂ ಸ್ವಯಂಸೇವಕರಿಗೆ ಜಿಲ್ಲಾ ಆಡಳಿತದ ಪರವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ಅಭಿನಂದನೆ ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ :ನಿಸಾರ್ ಅಹಮದ್



ವಿಜಯನಗರ,ಜೂ.30–

ರಾಜ್ಯದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಸುಮಾರು 2.7 ಲಕ್ಷ ಅಲ್ಪಸಂಖ್ಯಾತ ಸಮುದಾಯದ ಮಕ್ಕಳು ಶಿಕ್ಷಣ ಪಡೆಯಬೇಕಿತ್ತು. ಆದರೆ ಪ್ರಸ್ತುತ ಕೇವಲ 1.7 ಲಕ್ಷ ಮಕ್ಕಳು ಮಾತ್ರ ವಿದ್ಯಾಭ್ಯಾಸ ಮಾಡುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಈ ಕುರಿತು ಇಲಾಖೆಗಳ ಬಳಿ ನಿಖರ ಮತ್ತು ಸ್ಪಷ್ಟ ದತ್ತಾಂಶದ ಕೊರತೆಯಿದ್ದು, ಅಧಿಕಾರಿಗಳು ತಕ್ಷಣವೇ ನಿಖರವಾದ ಮಾಹಿತಿ ನೀಡಬೇಕು ಎಂದು ರಾಜ್ಯ ಅಲ್ಪಸಂಖ್ಯಾರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ತಿಳಿಸಿ ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಪ್ರಗತಿ ಪರಿಶಿಲನಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

2011ರ ಶೈಕ್ಷಣಿಕ ಸರ್ವೇ ವರದಿಯನ್ನು ಉಲ್ಲೇಖಿಸಿದ ಅವರು, ಅಲ್ಪಸಂಖ್ಯಾತ ಸಮುದಾಯದಲ್ಲಿ ಕೇವಲ ಶೇ. 42.73ರಷ್ಟು ವಿದ್ಯಾರ್ಥಿಗಳು ಮಾತ್ರ ಸಾಕ್ಷರತೆ ಪ್ರಮಾಣ ಹೊಂದಿರುವುದು ಆತಂಕ ಮೂಡಿಸಿದೆ. ಮಕ್ಕಳ ಭವಿಷ್ಯವನ್ನು ಕಸಿಯುತ್ತಿರುವ ಪೋಷಕರಲ್ಲಿ ಶಿಕ್ಷಣದ ಬಗ್ಗೆ ವ್ಯಾಪಕ ಅರಿವು ಮೂಡಿಸಬೇಕು. ಜಿಲ್ಲೆಯ ಯಾವೊಬ್ಬ ವಿದ್ಯಾರ್ಥಿಯೂ ಶಾಲೆಯಿಂದ ಹೊರಗುಳಿಯದಂತೆ ಇಲಾಖೆಗಳು ಕಟ್ಟೆಚ್ಚರ ವಹಿಸಬೇಕು ಎಂದು ಅವರು ತಾಕೀತು ಮಾಡಿದರು.

ಶಿಕ್ಷಕರ ಕೊರತೆ ನೀಗಿಸಲು ಹೊರಗುತ್ತಿಗೆ ನೇಮಕಾತಿ: ಜಿಲ್ಲಾದ್ಯಂತ ಹಲವು ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗದಂತೆ, ಅಗತ್ಯಕ್ಕೆ ಅನುಗುಣವಾಗಿ ತಕ್ಷಣವೇ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರನ್ನು ನೇಮಕ ಮಾಡಿಕೊಂಡು ಗುಣಮಟ್ಟದ ಶಿಕ್ಷಣ ನೀಡಲು ಸೂಚಿಸಲಾಯಿತು.

ಶಾಲಾ ಮೂಲಸೌಕರ್ಯ ವೃದ್ಧಿ: ಜಿಲ್ಲಾದ್ಯಂದ 748 ಶಾಲೆಗಳಿದ್ದು, ಅದರಲ್ಲಿ 46 ಸರ್ಕಾರಿ ಉರ್ದು ಶಾಲೆ, 2 ಅನುದಾನಿತ ಮತ್ತು 2 ಅನುದಾನ ರಹಿತ ಉರ್ದು ಶಾಲೆ ಕಾರ್ಯನಿರ್ವಹಿಸುತ್ತಿವೆ. ಇಲ್ಲಿನ ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ಅಗತ್ಯವಾಗಿ ಬೇಕಾದ ಕುಡಿಯುವ ನೀರು, ಸುಸಜ್ಜಿತ ಶೌಚಾಲಯ, ಉತ್ತಮ ಶಾಲಾ ಕೊಠಡಿಗಳು ಹಾಗೂ ಆಟದ ಮೈದಾನದ ವ್ಯವಸ್ಥೆಯನ್ನು ಆದ್ಯತೆಯ ಮೇರೆಗೆ ಕಲ್ಪಿಸಬೇಕು.

ಸಕಾಲಕ್ಕೆ ಸಾಲ ಸೌಲಭ್ಯ ವಿತರಣೆ: ಲೀಡ್ ಬ್ಯಾಂಕ್ ಮತ್ತು ವಿವಿಧ ಇಲಾಖಾ ನಿಗಮ- ಸಂಸ್ಥೆಗಳಿಂದ ಅರ್ಹ ಫಲಾನುಭವಿಗಳಿಗೆ ಶೈಕ್ಷಣಿಕ ಸಾಲ, ವಸತಿ ಸಾಲ ಹಾಗೂ ಕೃಷಿ ಸಂಬಂಧಿತ ಸಾಲಗಳನ್ನು ಸಕಾಲದಲ್ಲಿ ಒದಗಿಸಬೇಕು. ಇದರೊಂದಿಗೆ ಬೀದಿ ಬದಿ ವ್ಯಾಪಾರಿಗಳಿಗೂ ಸಾಲ ಸೌಲಭ್ಯ ಸಿಗುವಂತೆ ನೋಡಿಕೊಳ್ಳಬೇಕು.

ಪ್ರಧಾನ ಮಂತ್ರಿ ಆವಾಸ್ ಯೋಜನೆ: ಜಿಲ್ಲೆಯಲ್ಲಿನ ನಿರ್ಗತಿಕರಿಗೆ, ಅಶಕ್ತರಿಗೆ ವಿವಿಧ ಇಲಾಖೆಗಳಿಂದ ಮಂಜೂರಾಗುವ ಮನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ವಾಸಕ್ಕೆ ನೀಡಬೇಕು. ಯಾವುದೇ ರೀತಿಯ ನೆಪ ಹೇಳಿ ಕಾಮಗಾರಿ ಕುಂಟಿತವಾಗಿದೆ ಕುಂಟು ನೆಪ ಸಲ್ಲದು. ಆದಷ್ಟು ತ್ವರಿತವಾಗಿ ಮನೆ ಕಾಮಗಾರಿ ಪೂರ್ಣಗೊಳಿಸಿ ಮುಕ್ತ ವಾಸಕ್ಕೆ ನೀಡಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಬಂಧಪಟ್ಟ ಅಧಿಕಾರಿಗಳು ಕಳೆದ ವರ್ಷ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 772 ಮನೆ ಮಂಜೂರಾಗಿದ್ದು, ಈ ಪೈಕಿ 561 ಪೂರ್ಣಗೊಂಡಿವೆ. ಬಾಕಿ ಉಳಿದಿರುವ 211 ಮನೆಗಳ ನಿರ್ಮಾಣ ಕಾರ್ಯವು ಪ್ರಸ್ತುತ ಪ್ರಗತಿ ಹಂತಗಳಲ್ಲಿದ್ದು, ಮುಂಬರುವ ಸೆಪ್ಟೆಂಬರ್ ವೇಳೆಗೆ ಸಂಪೂರ್ಣವಾಗಿ ಮುಕ್ತಾಯಗೊಳ್ಳಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ರೀತಿಯ ವಿಳಂಬ ಧೋರಣೆಯನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದ ಅವರು, ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ಮಾಡಿ ಪ್ರಗತಿ ಸಾಧಿಸಬೇಕೆಂದು ಎಂದರು.

ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮಾತನಾಡಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ವಸತಿ ನಿಲಯಗಳು ಎದುರಿಸುತ್ತಿರುವ ಮೂಲ ಸೌಕರ್ಯ ಹಾಗೂ ಇಲಾಖಾ ಮಟ್ಟದ ಇತರೆ ಸಮಸ್ಯೆಗಳ ಕುರಿತು ಕ್ರಮ ಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಇರುವ ಎಲ್ಲಾ ಪ್ರಮುಖ ಬೇಡಿಕೆಗಳು ಮತ್ತು ಸವಾಲುಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗು ವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯ ಕ್ಷರ ವಿಶೇಷ ಕಾರ್ಯದರ್ಶಿ ಮುಜೀ ಬುಲ್ಲಾ ಖಾನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜಾಹ್ನವಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ್, ಪ್ರಗತಿ ಪರಿಶೀಲನಾ ಸಭೆ ಆರಂಭಕ್ಕೂ ಮುನ್ನ ಅಲ್ಪಸಂಖ್ಯಾತರ ಸಮುದಾಯದವರಿಂದ ಕುಂದು ಕೊರತೆ ಅಹವಾಲು ಸ್ವೀಕರಿಸಿದರು. ಈ ವೇಳೆ ಸಂವಿಧಾನದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಹಾಗೂ ಪಾರ್ಸಿ ಸೇರಿದಂತೆ ಆರು ಸಮುದಾಯಗಳು ಅಲ್ಪಸಂಖ್ಯಾತರ ಪಟ್ಟಿಯಲ್ಲಿ ಸೇರಿವೆ.



ಆಯ್ಕೆಯಾದ ಒಟ್ಟು 20 ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ವಿತರಣೆ

ಕಲಬುರಗಿ,ಜೂ.30–

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ 2025-26ನೇ ಸಾಲಿನಲ್ಲಿ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯಡಿ ಆಯ್ಕೆಯಾದ 10 ಅಂಧ ವಿದ್ಯಾರ್ಥಿಗಳಿಗೆ ಕಲಬುರಗಿ ಜಿಲ್ಲಾಧಿಕಾರಿಗಳಾದ ಇಕ್ರಮ್ ಶರೀಫ್ ಸೋಮವಾರ ಕಲಬುರಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದರು.

ಅದೇ ರೀತಿ ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ಶರಣಪ್ಪ ಸಂಕನೂರ ಅವರು ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆಯಡಿ ಆಯ್ಕೆಯಾದ 10 ಅಂಧ ವಿದ್ಯಾರ್ಥಿಗಳಿಗೆ ಕಲಬುರಗಿ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಕಲಬುರಗಿ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸಾದಿಕ್ ಹುಸೇನ್ ಖಾನ್, ಅಂಧ ಬಾಲಕರ ಸರ್ಕಾರಿ ಪ್ರೌಢ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಪ್ರಕಾಶ ಭಜಂತ್ರಿ ಸೇರಿದಂತೆ ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆಯ ಸಿಬ್ಬಂದಿ ಮೇಘಾಂಜಲಿ ಸೇರಿದಂತೆ ಆಯ್ಕೆಯಾದ 20 ಅಂಧ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ರಾಜ್ಯಸಭೆಯಲ್ಲಿ ಮತ್ತೆ ಖರ್ಗೆಜಿ; ನಾಯಕರಿಂದ ಪುಷ್ಪಗುಚ್ಛ ನೀಡಿ ಅಭಿನಂದನೆ

ಹಾಗೂ ಬಸನಗೌಡ ದದ್ದಲ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದು, ಪುಷ್ಪಗುಚ್ಛ ನೀಡಿ ಅಭಿನಂದಿಸಿದ್ದರು.

ಸಾರ್ವಜನಿಕರು ಸಹಕಾರ ನೀಡಲು ಜಿಲ್ಲಾಧಿಕಾರಿ ಪೂವಿತಾ ಎಸ್. ಮನವಿ

ನೀಡದಂತೆ ಕೋರಲಾಗಿದೆ. ಸದರಿ ಸ್ಥಳದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಸಾರ್ವಜನಿಕ ಸುರಕ್ಷತೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳಲಿವೆ ಎಂದು ಜಿಲ್ಲಾಧಿಕಾರಿ ಪೂವಿತಾ ಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಗೆ ನಾಲ್ಕು ಸಚಿವ ಸ್ಥಾನ ನೀಡಲು ಕಾಂಗ್ರೆಸ್ ಹೈಕಮಾಂಡ್ ಗೆ ಒತ್ತಾಯ

ಹಾಗೂ ಇಬ್ಬರು ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡಿದಲ್ಲಿ ರಾಯಚೂರು ಜಿಲ್ಲೆಗೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ದೊರೆಯ ಲಿದ್ದು, ಕಲ್ಯಾಣ ಕರ್ನಾಟಕ ಭಾಗ ದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಹಿಂದಿನ ಅವಧಿಯಲ್ಲಿ ಕಲಬುರಗಿ ಜಿಲ್ಲೆಗೆ ನಾಲ್ಕರಿಂದ ಐದು ಸಚಿವ ಸ್ಥಾನಗಳನ್ನು ನೀಡಲಾಗಿದ್ದ ಉದಾಹರಣೆಯನ್ನು ಉಲ್ಲೇಖಿಸಿದ ಅವರು, ಅದೇ ಮಾದರಿಯಲ್ಲಿ ರಾಯಚೂರು ಜಿಲ್ಲೆಗೂ ನಾಲ್ಕು ಸಚಿವ ಸ್ಥಾನಗಳನ್ನು ನೀಡಿದರೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅನುಕೂಲವಾಗಲಿದೆ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಕಾಂಗ್ರೆಸ್ ಮುಖಂಡರಾದ ಕೃಷ್ಣಮೂರ್ತಿ ಅವರು ಉಪಸ್ಥಿತರಿದ್ದರು.

ಶಾಸಕರಿಂದ ಅರ್ಜಿ ಭರ್ತಿ ಮಾಡಿ 2026ರ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಚಾಲನೆ

ಸದಸ್ಯರು, ಸಂಬಂದ ಪಟ್ಟ ಬಿಎಲ್ ಓ, ಗ್ರಾಮ ಲೆಕ್ಕಾಧಿಕಾರಿ, ಅಥವಾ ತಹಸೀಲ್ದಾರ ಕಛೇರಿಗೆ ಬೇಟಿ ನೀಡಿ ಮಾಹಿತಿ ನೀಡಿ ಎಂದರು. ಈ ಸಂದರ್ಭದಲ್ಲಿ ಮಲ್ಲಟ ನಾಡ ತಹಶೀಲ್ದಾರ ರಾಜಕುಮಾರ್, ಶಿರಸ್ತೆದಾರ ಪಕ್ರುದ್ದಿನ್, ಕಂದಾಯ ನಿರೀಕ್ಷಕ ಅರಳಪ್ಪ, ಗ್ರಾಮ ಲೆಕ್ಕಾಧಿಕಾರಿಗಳಾದ ಖಾಜಾ ಮೊಹಿನೂದ್ದೀನ್ ಬಿಎಲ್ಓ, ಬಿಎಲ್ಎ, ಬಿಎಲ್ಒಹಾಗೂ ಇನ್ನಿತರ ಉಪಸ್ಥಿತರಿದ್ದರು.

ಲಿಂಗಸ್ಗೂರು: ವಸತಿ ಮತ್ತು ನಿವೇಶನಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ, ಮನವಿ ಸಲ್ಲಿಕೆ

ಎಚ್ಚೆತ್ತುಕೊಂಡು ಸಮೀಕ್ಷೆ ನಡೆಸಿ ವಸತಿ ಹೀನರಿಗೆ ಆಶ್ರಯ ಕಲ್ಪಿಸಬೇಕು, ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ ಪ್ರಮುಖ ರು: ಈ ಬೃಹತ್ ಪ್ರತಿಭಟನಾ ಪ್ರದರ್ಶನ ಹಾಗೂ ಮನವಿ ಸಲ್ಲಿಕೆಯ ನೇತೃತ್ವವನ್ನು ವಿವಿಧ ಜನಪರ ಸಂಘಟನೆಗಳ ಪ್ರಮುಖರು ವಹಿಸಿದ್ದರು:

ಮುಖಂಡರು: ನಿಂಗಪ್ಪ ಎಂ. ವೀರಾಪೂರು (ತಾಲೂಕು ಉಪಾಧ್ಯಕ್ಷರು), ಪಂಚಲಯ್ಯ ಹಟ್ಟಿ ಕ್ಯಾಂಪ್ (ಜಿಲ್ಲಾ ಉಪಾಧ್ಯಕ್ಷರು), ರಜೀಯಾ, ವನಜಾಕ್ಷಿ, ಶಾಂತಕುಮಾರಿ, ದುರುಗಮ್ಮ, ಗಾಯತ್ರಿ. ಹಾಗೂ ಕಾರ್ಮಿಕ ಸಂಘಟನೆಗಳು: ಅಲ್ಲಾಭಕ್ಷ ದೇವಾಪೂರ, ಪಕ್ರುದಿನ್, ಶ್ರೀಧರ (ಹಾಗೂ ಹಟ್ಟಿ ಚಿನ್ನದ ಗಣಿ ಕಾರ್ಮಿಕ ಸಂಘದ ಮುಖಂಡರು), ದಾವುದಬೈ, ಹಾಜಿಬಾಬು ಕಟ್ಟೀಮನಿ, ಖಾಜಾಮೈನುದ್ದಿನ್ (ಸಂಘದ ಮುಖಂಡರು)., ಹಾಗೂ ಇತರರು: ಮಹಾಂತೇಶ (ಮುಖಂಡರು), ಸಹಾರ (ತಾಲೂಕು ಮುಖ ಂಡರು), ರೀಯಾಜ್ ಖುರೇಸಿ. ಹೋರಾಟದಲ್ಲಿ ಹಟ್ಟಿ ಪಟ್ಟಣದ ನೂರಾರು ವಸತಿಹೀನ ನಿವಾಸಿಗಳು, ಶೋಷಿತ ಮಹಿಳೆಯರು ಮತ್ತು ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಂ ಡು ಅಧಿಕಾರಿಗಳಿಗೆ ತಮ್ಮ ಆಕ್ರೋಶ ವನ್ನು ತಲು ಪಿಸುವಲ್ಲಿ ಯಶಸ್ವಿಯಾದರು. ಸ್ಥಳಕ್ಕೆ ಆಗಮಿಸಿದ ಮುಖ್ಯಾಧಿಕಾರಿಗಳು ಮನವಿ ಸ್ವೀಕರಿಸಿ, ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ರಾಜ್ಯವ್ಯಾಪಿ ಹೋರಾಟಕ್ಕೆ ಯುವ ನಾಯಕತ್ವ ಅಗತ್ಯ -ಯಂಕಪ್ಪ ಪಿರಂಗಿ

ಸಭೆಯಲ್ಲಿ ನೂತನ ಪದಾಧಿಕಾರಿಗಳಾಗಿ ಶ್ರೀಕಾಂತ ಬಾಗೇವಾಡಿ ಅವರನ್ನು ರಾಜ್ಯ ಸಂಘಟನಾ ಕಾರ್ಯದರ್ಶಿ (ಕಲಬುರಗಿ ವಿಭಾಗ), ರಾಮನಗೌಡ ಅವರನ್ನು ಜಿಲ್ಲಾ ಮಟ್ಟದ ಪದಾಧಿಕಾರಿ, ಎನ್.ಎಚ್. ಬಾಷ ಅವರನ್ನು ಜಿಲ್ಲಾ ಗೌರವಾಧ್ಯಕ್ಷರು, ಉಮೇಶ್ ಎಸ್ ಅವರನ್ನು ಜಿಲ್ಲಾ ತಾಂತ್ರಿಕ ನಿರ್ದೇಶಕರು ಹಾಗೂ ಸಿದ್ದರಾಯ ರುದ್ರಗಂಟಿ ಅವರನ್ನು ಜಿಲ್ಲಾ ಪದಾಧಿಕಾರಿಯಾಗಿ ಆಯ್ಕೆ ಮಾಡಲಾಯಿತು.

ಸಮಾರೋಪ ಭಾಷಣದಲ್ಲಿ ಅಧ್ಯಕ್ಷರು ಮಾತನಾಡಿ, 2026ನೇ ಸಾಲಿನಲ್ಲಿ ಸಂಘದಲ್ಲಿ ಯುವಕರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ರಾಜ್ಯವ್ಯಾಪಿ ಹೋರಾಟಗಳನ್ನು ಸಂಘಟಿತವಾಗಿ ನಡೆಸಲು ಸಾಧ್ಯವಾಗುತ್ತದೆ. ಇದರಿಂದ ಶಿಕ್ಷಕರ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೂ ಬಲ ಸಿಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಖಜಾಂಚಿ ರಾಜಶ್ರೀ ಸಜ್ಜನ್, ತಾಲೂಕು ಅಧ್ಯಕ್ಷರಾದ ಶಿವಶಂಕರ (ಸಿಂಧನೂರು), ಸಂಗಪ್ಪ (ಲಿಂಗಸೂಗೂರು), ಮಹಿಬೂಬ್ (ಸಿರವಾರ), ರಂಗನಾಥ (ದೇವದುರ್ಗ), ಶಶಿಕಾಂತ, ಲಾಲ್ ಸಾಬ್, ನರಸಪ್ಪ ಇಡಪನೂರು, ಕವಿತಾ, ಪರಿಮಳ ಭಂಡಾರಿ, ಶಕುಂತಲಾ, ಮಲ್ಲನಗೌಡ, ಅನಿಲಕುಮಾರ, ರುದ್ರಗಂಟಿ ಸ್ರ್ ಖಾಲಿಕ್ ಸ್ರ್ ಶೇಖರಪ್ಪ ಸೇರಿದಂತೆ ಎಲ್ಲಾ ತಾಲೂಕು ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಕೊಪ್ಪಳ: ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಿ ಆರೋಗ್ಯವಂತರನ್ನಾಗಿಸಿ- ರಾಘವೇಂದ್ರ ಹಿಟ್ನಾಳ

ಕೊಪ್ಪಳ,ಜೂ.30 -

ದೇಶದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪೋಲಿಯೋ ಹನಿ ಹಾಕಿಸಿ, ಅವರನ್ನು ಆರೋಗ್ಯವಂತರನ್ನಾಗಿಸಬೇಕೆಂದು ಕೊಪ್ಪಳ ವಿಧಾನಸಭೆ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿದೆ ಕೊಪ್ಪಳದ ಕೇಂದ್ರಿಯ ಬಸ್ ನಿಲ್ದಾಣದಲ್ಲಿ ಭಾನುವಾರ (ಜೂ. 28ರಂದು) ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಮಗುವಿಗೆ ಪೋಲಿಯೋ ಹನಿ ಹಾಕುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ಜಿಲ್ಲೆಯಲ್ಲಿ ದಿನಾಂಕ ಜುಲೈ 1 ರವರಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾರತ ದೇಶ ಈಗಾಗಲೆ ಪೋಲಿಯೋ ರೋಗ ಮುಕ್ತ ದೇಶವಾಗಿದೆ. ಆದರೆ, ನಮ್ಮ ದೇಶದ ಪಕ್ಕದ ರಾಷ್ಟ್ರಗಳಲ್ಲಿ ಪೋಲಿಯೋ ಪ್ರಕರಣಗಳು ಕಂಡು ಬರುವ ಹಿನ್ನಲೆಯಲ್ಲಿ ಮುಂಜಾಗೃತ ಕ್ರಮವಾಗಿ ನಮ್ಮ ದೇಶದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪೋಲಿಯೋ ಲಸಿಕೆಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಪ್ರತಿಯೊಬ್ಬ ಮಗು ಆರೋಗ್ಯವಂತವಾಗಿರಲು ಶ್ರಮಿಸಲಾಗುತ್ತಿದೆ. ಅರ್ಹ ಮಗುವಿಗೆ ಪೋಲಿಯೋ ಲಸಿಕೆ ಹಾಕಿಸುವುದು ಪ್ರತಿಯೊಬ್ಬರ ಜವಬ್ದಾರಿಯಾಗಿದ್ದು, ತಮ್ಮ ಸುತ್ತಮುತ್ತಲಿನ ಸಾರ್ವಜನಿಕರಿಗೂ ಪಲ್ಸ್ ಪೋಲಿಯೋ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ತಿಳಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.



ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ್ ಅವರು ಸಹ ಮಗುವಿಗೆ ಪೋಲಿಯೋ ಲಸಿಕೆ ಹಾಕುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ನಾವು ಈಗಾಗಲೇ ಪೋಲಿಯೋ ರೋಗದಿಂದ ಮುಕ್ತವಾಗಿದ್ದು, ಮುಂಜಾಗೃತ ಕ್ರಮಕ್ಕಾಗಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪೋಲಿಯೋ ಹನಿ ಹಾಕಲಾಗುತ್ತದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲಾ ಪಾಲಕರು ತಮ್ಮ ಸಮೀಪದ ಸರ್ಕಾರಿ ಆಸ್ಪತ್ರೆ, ಅಂಗನವಾಡಿ ಕೇಂದ್ರ, ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ತೆರೆಯಲಾದ ಪೋಲಿಯೋ ಕೇಂದ್ರಗಳಿಗೆ ಭೇಟಿ ನೀಡಿ, 5 ವರ್ಷದೊಳಗಿನ ತಮ್ಮ ಮಕ್ಕಳಿಗೆ ತಪ್ಪದೇ 2 ಹನಿ ಪೋಲಿ ಯೋ ಲಸಿಕೆ ಹಾಕಿಸುವಂತೆ ಹೇಳಿ ದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಈಗಾಗಲೇ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನಗರ ಸಭೆ, ಪಟ್ಟಣ ಪಂಚಾಯತ್, ಗ್ರಾಮ ಪಂಚಾಯತ್ ಹಾಗೂ ಶಿಕ್ಷಣ ಇಲಾಖೆಯಿಂದ ವಿವಿಧ ಹಂತಗಳಲ್ಲಿ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ. ಎಲ್ಲರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಲಿಂಗರಾಜು ಟಿ., ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಪ್ರಕಾಶ ವಿ., ಜಿಲ್ಲಾ ರೋಗವಾಕ ಆಶ್ರೀತ ರೋಗಗಳ ನಿಯಂತ್ರಣ ಅಧಿಕಾರಿಗಳಾದ ಡಾ. ಗೋನಾಳ ಕುಮಾರಸ್ವಾಮಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ನಂದಕುಮಾರ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಮಂಜುನಾಥ ಗೊಂಡಬಾಳ, ತಾಲೂಕ ಅಧಿಕಾರಿ ಗಳಾದ ಡಾ. ರಾಮಾಂಜನೇಯ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಜ್ಯೋತಿ ಎಂ. ಗೊಂಡಬಾಳ, ರೋಟರಿ ಕ್ಲಬ್ ಅಧ್ಯಕ್ಷರಾದ ಮಂಜುನಾಥ ಅಂಗಡಿ, ಮಾಜಿ ಜಿಲ್ಲಾ ಗೌರ್ನರ್ ಡಾ. ಕೆ.ಜಿ ಕುಲಕರ್ಣಿ, ಡಾ. ರಾಧಾ ಕುಲಕರ್ಣಿ ಮತ್ತು ಇತರ ರೋಟರಿ ಹಾಗೂ ಲಯನ್ಸ್ ಕ್ಲಬ್ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವೈದ್ಯಾಧಿಕಾರಿ ಗಳು ಮತ್ತು ವಿವಿಧ ವೃಂದದ ಅಧಿಕಾರಿಗಳು, ಸಿಬ್ಬಂದಿಗಳು, ಕೆ.ಎಸ್.ಆರ್.ಟಿ.ಸಿ ಇಲಾಖೆಯ ಅಧಿಕಾರಿಗಳು, ಇತರೆ ಜನಪ್ರತಿನಿಧಿ , ಸಾರ್ವಜನಿಕರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ತೆಕ್ಕಲಕೋಟೆಯಲ್ಲಿ ಜಂಟಿ ದಾಳಿ ಇಬ್ಬರು ಬಾಲಕಾರ್ಮಿಕರ ರಕ್ಷಣೆ

ಬಳ್ಳಾರಿ,ಜೂ.30 -

ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಪಟ್ಟಣದಲ್ಲಿ ವಿವಿಧ ಇಲಾಖೆಗಳ ಜಂಟಿ ಆಶ್ರಯದಲ್ಲಿ ಸೋಮವಾರ ಹಠಾತ್ ದಾಳಿ ನಡೆಸಿ, ಇಬ್ಬರು ಬಾಲಕಾರ್ಮಿಕರನ್ನು ರಕ್ಷಿಸಲಾಗಿದೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಕಂದಾಯ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಪೊಲೀಸ್ ಇಲಾಖೆ ಹಾಗೂ ಚೈಲ್ಡ್ ಲೈನ್ ಸಹಯೋಗದೊಂದಿಗೆ ತೆಕ್ಕಲ ಕೋಟೆ ಪಟ್ಟಣ ಪಂಚಾಯತಿ ಸಭಾಂ ಗಣದಲ್ಲಿ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯನ್ನು ನಡೆಸ ಲಾಯಿತು.

ನಂತರ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಗ್ಯಾರೇಜ್, ಹೋಟೆಲ್, ಬೇಕರಿ, ಕಿರಾಣಿ ಅಂಗಡಿ, ಬಟ್ಟೆ ಅಂಗಡಿ ಸೇರಿದಂತೆ ಸುಮಾರು 20 ಉದ್ದಿಮೆಗಳ ಮೇಲೆ ಅಧಿಕಾರಿಗಳ ತಂಡ ಜಂಟಿ ದಾಳಿ ನಡೆಸಿತು.

ಮರು ದಾಖಲಾತಿ ಮತ್ತು ಕಾನೂನು ಕ್ರಮ:



ದಾಳಿಯ ವೇಳೆ ಪತ್ತೆಯಾದ ಇಬ್ಬರು ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಅಧಿಕಾರಿಗಳು ಸುರಕ್ಷಿತವಾಗಿ ರಕ್ಷಿಸಿ, ಕೆಲಸದಿಂದ ಬಿಡುಗಡೆಗೊಳಿಸಿದರು. ಬಳಿಕ ಆ ಮಕ್ಕಳನ್ನು ಅವರು ಈ ಹಿಂದೆ ವ್ಯಾಸಂಗ ಮಾಡುತ್ತಿದ್ದ ಶಾಲೆಗೇ ಮರು ದಾಖಲಿಸುವ ಮೂಲಕ ಶಿಕ್ಷಣದ ಮುಖ್ಯವಾಹಿನಿಗೆ ತರಲಾಯಿತು. ಸದ್ಯ ಮಕ್ಕಳ ವಯಸ್ಸಿನ ದಾಖಲಾತಿಗಳನ್ನು ಪಡೆದುಕೊಳ್ಳಲಾಗುತ್ತಿದ್ದು, ಕಾನೂನು ಉಲ್ಲಂಘಿಸಿದ ಅಂಗಡಿ ಮಾಲೀಕರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಬಾಲಕಾರ್ಮಿಕ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗು ವುದು ಎಂದು ಅಧಿಕಾರಿಗಳು ತಿಳಿಸಿ ದ್ದಾರೆ.

ಕಾರ್ಯಾಚರಣೆಯ ಜೊತೆಗೆ, ಪಟ್ಟಣದ ಅಂಗಡಿ ಮತ್ತು ಉದ್ದಿಮೆಗಳ ಮಾಲೀಕರಿಗೆ ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಹಾಗೂ ಕಿಶೋರ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು ಎಂದು ಎಚ್ಚರಿಕೆ ನೀಡಲಾಯಿತು. ಈ ಕುರಿತು ಜಾಗೃತಿ ಪೋಸ್ಟರ್ ಗಳನ್ನು ವಿತರಿಸುವ ಮೂಲಕ ಮಾಲೀ ಕರಲ್ಲಿ ಅರಿವು ಮೂಡಿಸಲಾಯಿತು.

ಈ ಟಾಸ್ಕ್ ಫೋರ್ಸ್ ಕಾರ್ಯಾಚರಣೆಯಲ್ಲಿ ಸಿರುಗುಪ್ಪ ಕಾರ್ಮಿಕ ನಿರೀಕ್ಷಕ ತಿರುಮಲೇಶ್, ತೆಕ್ಕಲಕೋಟೆ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿ ಪರಶುರಾಮ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಂ. ಸಿದ್ದಯ್ಯ, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕ ಎ. ಮೌನೇಶ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಮಂಜು ನಾಥರೆಡ್ಡಿ, ಪೊಲೀಸ್ ಸಬ್ ಇನ್ಸ್ ಪೆಕ್ಟರ್ ನಾರಾಯಣ ಸ್ವಾಮಿ, ಕಂದಾಯ ನಿರೀಕ್ಷಕ ಎನ್.ವಿ. ಪ್ರಸನ್ನ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಹೇಮಾವತಿ, ಪಟ್ಟಣ ಪಂಚಾಯತಿ ಸಿಬ್ಬಂದಿ ಸುಮಲತಾ, ಮಕ್ಕಳ ಸಹಾಯವಾಣಿ (ಚೈಲ್ಡ್ ಲೈನ್) ಸಿಬ್ಬಂದಿ ಕಾರ್ತಿಕ್, ಪ್ಯಾರಾ ಲೀಗಲ್ ವಾಲೆಂಟಿಯರ್ ಲಕ್ಷ್ಮಿ ಸೇರಿದಂತೆ ಇತರರು ಇದ್ದರು.

ಯಾದಗಿರಿ: ಪರ್ಯಾಯ ಬೆಳೆಗೆ ರೈತರಿಗೆ ಸೂಚನೆ

ಯಾದಗಿರಿ, ಜೂ.30-

ಯಾದಗಿರಿ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಕಡಿಮೆ ಮಳೆ ಯಾಗುವ ಸಾಧ್ಯತೆ ಇರುವುದರಿಂದ, ರೈತರು ಅಧಿಕ ನೀರಿನ ಅವಶ್ಯಕತೆ ಇರುವ ಬೆಳೆಗಳನ್ನು ಬೆಳೆಯದೇ, ಕಡಿಮೆ ನೀರಿನಿಂದ ಮತ್ತು ಕಡಿಮೆ ಅವಧಿಯಲ್ಲಿ ಕಟಾವಿಗೆ ಬರುವ ಬೆಳೆಗಳಾದ ಹುರುಳಿ, ಸೂರ್ಯಕಾಂತಿ, ಸಜ್ಜೆ, ಸಿರಿಧಾನ್ಯಗಳಾದ ನವಣೆ, ಹರಕು, ಬರಗು, ಜೋಳ ಮತ್ತು ಎಳ್ಳು ಬೆಳೆಗಳನ್ನು ಬೆಳೆಯಲು ರೈತರಲ್ಲಿ ವಿನಂತಿಸಿದೆ. ಈಗಾಗಲೇ ಹತ್ತಿ ಬಿತ್ತನೆ ಮಾಡಿ, ಮೊಳಕೆ ಬಾರದೇ ಇರುವ ಪ್ರಸಂಗದಲ್ಲಿ ಮೇಲೆ ತಿಳಿಸಿದ ಕಡಿಮೆ ನೀರಿನಿಂದ ಬೆಳೆಯುವ ಬೆಳೆಗಳನ್ನು ಪರ್ಯಾಯ ಬೆಳೆಗಳನ್ನಾಗಿ ಬೆಳೆಯಲು ಜಿಲ್ಲೆಯ ರೈತರಿಗೆ ಜಂಟಿ ಕೃಷಿ ನಿರ್ದೇಶಕರು ಶ್ರೀ ರತೇಂದ್ರನಾಥ ಸುಗೂರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆಯ ಆವರಣದಲ್ಲಿ ವಿಶೇಷ (ಎಸ್ಐಆರ್) ಸಮಗ್ರ ಪರಿಸ್ಕರಣೆ ಕಾರ್ಯಕ್ರಮ

ರಾಯಚೂರು ನಗರದ ಉದಯನಗರದಲ್ಲಿರುವ .ಪ್ರಜಾಪಿತ ಬ್ರಹ್ಮಕುವಾರಿ ಸಂಸ್ಥೆಯ ಆವರಣದಲ್ಲಿ ದಿನಾಂಕ 29.ರಂದು ಜಿಲ್ಲಾಡಳಿತ .ಜಿಲ್ಲಾ ಪಂಚಾಯತ್ . ಸ್ವೀಪ್ ಸಮಿತಿ .ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಬ್ರಹ್ಮಕುಮಾರಿ ಸಂಸ್ಥೆಯ ಸಹಕಾರದೊಂದಿಗೆ ಮತದಾರ ರ ಪಟ್ಟಿಯ ವಿಶೇಷ ಸಮಗ್ರ ಪರಿಸ್ಕಾರಣಿ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮತದಾರ ಸಾಕ್ಷರತಾ ಕ್ಲಬ್ ನೋಡಲ ಅಧಿಕಾರಿ ಹಾಗೂ ಎಸ್ಐಆರ್ ಕಾರ್ಯಕ್ರಮಗಳ ಸಂಯೋಜನೆ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ .ಭಾರತ ಚುನಾವಣಾ ಆಯೋಗದಿಂದ ಕಾಲಕಾಲಕ್ಕೆ ನಡೆಸಲಾಗುವ ಭಾರತದ ಮತದಾರರ ನೈಜತೆ. ಲಭ್ಯತೆ .ಹಾಗೂ ನಿಜವಂತಿಕೆಯ ಪರಿಷ್ಕರಣೆ ಕಾರ್ಯಕ್ರಮ ಇದಾಗಿದ್ದು. ಮತದಾರರನ್ನು ಮೌಲ್ಯವನ್ನು ಗೌರವಿಸುವ ಎತ್ತಿ ಹಿಡಿಯುವ ಸಾಮಾನ್ಯ ಪ್ರಕ್ರಿಯೆ ಇದಾಗಿದೆ. ಮತದಾರರ ಪಟ್ಟಿಯ ಪರಿಸ್ಕರಣೆಯ ಇಂದು ನಿನ್ನೆದಲ್ಲ .ಇದು ಸ್ವಾತಂತ್ರ ಭಾರತದ ನಂತರ ಸಂವಿಧಾನ ಜಾರಿಯಾಗಿ 1951 ರ ಸಾರ್ವತ್ರಿಕ ಚುನಾವಣೆ ಭಾರತೀಯ ಪ್ರಜಾಪ್ರಭುತ್ವಕ್ಕೆ ಮತದಾರರ ಮತದಾನ ಕುರಿತಂತೆ ಮೊದಲ ಮತದಾರ ಪಟ್ಟಿಯ ತಯಾರಿಕೆಯಿಂದ ಐತಿಹಾಸಿಕ ಹೆಜ್ಜೆಗಳು ಕಾಣುತ್ತವೆ .ಒಬ್ಬ ಮತದಾರನ್ನು ಕೇವಲ ಒಂದು ಕಡೆ ಮತದಾರ ಪಟ್ಟಿಯಲ್ಲಿ ಹೆಸರನ್ನು ಸೇರಿಸಿಬೇಕು .ಇತ್ತೀಚಿನ ದಿನಗಳಲ್ಲಿ ಎರಡು ಮೂರು ಕಡೆ ಒಬ್ಬ ವ್ಯಕ್ತಿಯ ಮತದಾರಪಟ್ಟಿಯೇ ಹೆಸರು ಇರುವುದು ಕಂಡುಬಂದೆ .ಇಂತಹ ಗೊಂದಲಮಯವಾಗಿರುವಂತ ತೆಗೆದುಹಾಕಿ ಮಾದರಿಯ ಸ್ವಷ್ಟ ಶುದ್ಧ ಮತದಾರರ ಪಟ್ಟಿಯನ್ನು ತಯಾರಿಸುವ ಅಂಶವೇ ಎಸ್.ಐ.ಆರ್ ಕಾರ್ಯಕ್ರಮವಾಗಿದೆ ಎಂದು ಡಾ. ಬಿರಾದಾರ ಹೇಳಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶ್ರೀ ಎಂ.ವಿ ಹಿರೇಮಠ್ ರಾಷ್ಟ್ರೀಯ ಉಪಾಧ್ಯಕ್ಷರು ಅಖಿಲ ಭಾರತ ಹಿರಿಯ ನಾಗರಿಕರ ಮಹಾಸಂಗ ಇವರು ಮಾತನಾಡುತ್ತ .ವಿಶೇಷವಾಗಿ ಇದು ಅತ್ಯಂತ ಮಹತ್ವದ ಕಾರ್ಯಕ್ರಮ. ಪ್ರಜಾಪ್ರಭುತ್ವದಲ್ಲಿ ಮತದಾನ ಬಹಳ ಮಹತ್ವದಾಗಿದೆ. ಒಂದು ಮತ ದೇಶಕ್ಕೆ ಹಿತ ಎಂದು ಹಾಗೆ ನಾವು ನಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರಿದಾಗ .ನಾವು ಮತದಾನ ಮಾಡಲು ಅನುಕೂಲ ವಾಗುತ್ತದೆ

ಪ್ರತಿಯೊಬ್ಬರು ಜಾತಿ ಮತ ಭೇದಬಿಟ್ಟು ಮತದಾನ ದಿನ ಮತಗಟ್ಟೆಗೆ ಹೋಗಿ ಮತವನ್ನು ಚಲಾಯಿಸಿದ ಮೂಲಕ ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸಬೇಕೆಂದು ಹೇಳಿದರು ರಾಜ ಯೋಗಿನಿ ಬಿಕೆ ಸ್ಮಿತಾ ಅಕ್ಕ ಈ ಸಂದರ್ಭದಲ್ಲಿ ಮಾತನಾಡುತ್ತಾ ಈಗಾಗಲೇ ಬಿರಾದಾರ್ ಅಣ್ಣನವರು ತಮಗೆ ಎಸ್ಐಆರ್ ಕಾರ್ಯಕ್ರಮ ಕುರಿತು ಮಾತನಾಡಿದ್ದಾರೆ .ಈ ಒಂದು ಕಾರ್ಯಕ್ರಮದಲ್ಲಿ ಬಹಳಷ್ಟು ಜನ ಹಿರಿಯ ನಾಗರಿಕರು ತಾವೆಲ್ಲರೂ ಸಮಾಗಮ ಗೊಂಡಿದ್ದೀರಿ. ತಮ್ಮ ಮನೆಯಲ್ಲಿ ಇರುವಂತಹ ಮತದಾರರನ್ನ ಮತದಾರರ ಪಟ್ಟಿಯಲ್ಲಿ ಸೇರಿಸುವ ಕಾರ್ಯಕ್ಕೆ ತಾವೆಲ್ಲರೂ ಸಹಕಾರ ನೀಡಬೇಕು .ಬಿ ಎಲ್ ಓ ಈಗಾಗಲೇ ಜೂನ್ 30 ಮನೆ ಮನೆಗೆ ಭೇಟಿ ನೀಡುವ ಕಾರ್ಯಕ್ರಮ ಇದೆ ಎಂದು ಹೇಳಿದರು .

ಈ ಸಂದರ್ಭದಲ್ಲಿ ಶ್ರೀಮತಿ ಸರಸ್ವತಿ ಎಸ್ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು ವಿಕಲ ಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ರಾಯಚೂರಿನ ಮಹಾದೇವಪ್ಪ ಅಧ್ಯಕ್ಷರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನಿವೃತ್ತ ಸಂಘ ರಾಯಚೂರು ಶ್ರೀ ವೀರಭದ್ರಪ್ಪ ಅಧ್ಯಕ್ಷರು 95 ಭವಿಷ್ಯ ನಿಧಿ ನಿವೃತ್ತ ಪಿಂಚಿನದ ಸಮನ್ವಯ ಸಮಿತಿ ರಾಯಚೂರು

ಶ್ರೀ ಪವನ್ ಕಿಶೋರ್ ಪಾಟೀಲ್ ಮುಖ್ಯಸ್ಥರು ಹಿರಿಯ ನಾಗರಿಕರ ಸಹವಾಣಿಕೇಂದ್ರ, ನಾಗರಿ ಕರು ಈ ಕಾರ್ಯಕ್ರಮ ದಲ್ಲಿ ಉಪಸಿ ಥರಿದ್ದರು .

ಜಿಲ್ಲಾ ಸಮಾಲೋಚನಾ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆ

ಸಾಲ ಮಂಜೂರಾತಿಯಲ್ಲಿ ಅನಗತ್ಯ ವಿಳಂಬ ಸಲ್ಲದು : ಗದ್ದಿಗೌಡರ

ಬಾಗಲಕೋಟೆ,ಜೂ.30 -

ಸರಕಾರದ ವಿವಿಧ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರಾತಿಯಲ್ಲಿ ಅನಗತ್ಯ ವಿಳಂಬವಾಗದಂತೆ ಕ್ರಮವಹಿಸಬೇಕೆಂದು ಸಂಸದ ಪಿ.ಸಿ.ಗದ್ದಿಗೌಡರ ಬ್ಯಾಂಕರ್ಸ್‌ಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ಸಭಾ ಭವನದಲ್ಲಿ ಸೋಮವಾರ ಜಿಲ್ಲಾ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸರಕಾರದ ವಿವಿಧ ಯೋಜನೆಗಳ ಉದ್ದೇಶವು ಜನಸಾಮಾನ್ಯರಿಗೆ ಸುಲಭವಾಗಿ ತಲುಪಬೇಕಾದರೆ ಬ್ಯಾಂಕ್‌ಗಳು ಹಾಗೂ ಇಲಾಖೆಗಳ ನಡುವೆ ಉತ್ತಮ ಸಮನ್ವಯ ಅಗತ್ಯವಿದೆ. ರೈತರು, ಮಹಿಳೆಯರು, ಯುವ ಉದ್ಯಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ಅಗತ್ಯ ಹಣಕಾಸು ನೆರವು ಒದಗಿಸುವ ಕೆಲಸವಾಗಬೇಕು ಎಂದರು.

ಪ್ರಸಕ್ತ ಸಾಲಿನ ಮೊದಲನೇ ತ್ರೈಮಾಸಿಕ ಬ್ಯಾಂಕಿಂಗ್ ಸಾಧನೆ, ವಾರ್ಷಿಕ ಸಾಲ ಯೋಜನೆ ಅನುಷ್ಠಾನ, ಕೃಷಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಶಿಕ್ಷಣ, ವಸತಿ, ಸ್ವಯಂ ಉದ್ಯೋಗ ಹಾಗೂ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಿರುವ ಸಾಲದ ಪ್ರಗತಿಯನ್ನು ವಿವರವಾಗಿ ಪರಿಶೀಲಿಸಿದರು. ಪ್ರಧಾನಮಂತ್ರಿ ಮುದ್ರಾ ಯೋಜನೆ, ಪ್ರಧಾನಮಂತ್ರಿ ಸ್ವನಿಧಿ ಯೋಜನೆ, ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮ, ಕೃಷಿ ಸಾಲ, ಶಿಕ್ಷಣ ಸಾಲ ಹಾಗೂ ಮನೆ ಸಾಲ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಸಭೆಯಲ್ಲಿ ಪರಿಶೀಲಿಸಲಾಯಿತು.



ಆದ್ಯತಾ ವಲಯಗಳಾದ ಕೃಷಿ, ತೋಟಗಾರಿಕೆ, ಪಶು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಲ ವಿತರಣೆಯಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು. ವಿವಿಧ ಯೋಜನೆಗಳಡಿ ಬಾಕಿ ಉಳಿದಿರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ಅರ್ಹರಿಗೆ ಸಲ ಮಂಜೂರು ಮಾಡುವಂತೆ ಬ್ಯಾಂಕ್ ಅಧಿಕಾರಿಗಳಿಗೆ ಸೂಚಿಸಿದರು. ಇದೇ ವೇಳೆ ಮಾತನಾಡಿದ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರು ಸರಕಾರದ ವಿವಿಧ ಯೋಜನೆಗಳ ಲಾಭ ನಿಯಮಾನುಸಾರ ನಿಗದಿತ ಅವಧಿಯಲ್ಲಿ ಲಾಭ ದೊರೆಯದಿದ್ದರೆ ಹೇಗೆ ಎಂದು ಪ್ರಶ್ನಿಸಿದರು. ಬಾಕಿ ಇರುವ ಅರ್ಜಿಗಳನ್ನು 10 ದಿನಗಳೊಳಗಾಗಿ ವಿಲೇ ಮಾಡಿ ವರದಿ ಸಲ್ಲಿಸಲು ತಿಳಿಸಲಾಯಿತು.

ಬೀದಿ ಬದಿ ವ್ಯಾಪಾರಸ್ಥರಿಗೆ ಬ್ಯಾಂಕ್ ಸಾಲ ಕೊಡಲು ಆರ್‌ಡಿ ಸ್ಕಿಮ್ ಮಾಡಿದರೆ ಮಾತ್ರ ಸಾಲ ಮಂಜೂರು ಮಾಡುವುದಾಗಿ ಕೆಲವೊಂದು ಬ್ಯಾಂಕ್‌ಗಳು ಹೇಳುತ್ತಿರುವುದರಿಂದ ವ್ಯಾಪಾರಸ್ಥರಿಗೆ ತೊಂದರೆಯಾಗುತ್ತಿದೆ. ಈ ರೀತಿ ಆಗಬಾರದು. ಬ್ಯಾಂಕ್ ಅಧಿಕಾರಿಗಳಿಗೆ ತಮ್ಮ ವ್ಯಾಪ್ತಿಯ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನಿರ್ದೇಶನ ನೀಡಲು ತಿಳಿಸಿದರು. ಸೂರ್ಯಾಘರ್ ಯೋಜನೆಯಡಿ ಸೋಲಾರ ಅಳವಡಿಕೆ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ತಿಳಿಸಿದರು. ನಬಾರ್ಡ ಮತ್ತು ಆರ್.ಬಿ.ಐ ಅಧಿಕಾರಿಗಳು ಹೊಸ ಯೋಜನೆಗಳ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಆರ್‌ಸೆಟ್ ಸಂಸ್ಥೆಯಿಂದ ವಿವಿಧ ವೃತ್ತಿ ಕೌಶಲ್ಯ ಕುರಿತು ತರಬೇತಿ ನೀಡಿರುವ ಬಗ್ಗೆ ಮಾಹಿತಿಯನ್ನು ಸಭೆಗೆ ತಿಳಿಸಿದಾಗ ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ಮಾತನಾಡಿ ಮುಖ್ಯವಾಗಿ ವೈರಿಂಗ್, ಪ್ಲಂಬಿಂಗ್ ಸೇರಿದಂತೆ ಮೊಬೈಲ್, ಪೋಟೋಗ್ರಾಫಿ ಹಾಗೂ ಲೇಬರ್ ಓರಿಯಂಟ್ ತರಬೇತಿಗಳನ್ನು ನೀಡುವುದು ಅವಶ್ಯವಾಗಿದೆ. ತರಬೇತಿ ಕೊಟ್ಟು ಬ್ಯಾಂಕ್‌ನಲ್ಲಿ ಸಾಲ ಒದಗಿಸಿದರೆ ಸಾಲದು ಇದರಿಂದ ಪ್ರಯೋಜನವಾಗುತ್ತಿರುವ ಬಗ್ಗೆ ಗಮನ ಹರಿಸಲು ತಿಳಿಸಿದರು. ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಸಾಲ ಮಂಜೂರಾತಿಯಲ್ಲಿ ಬಾಕಿ ಇರುವ ಅರ್ಜಿಗಳನ್ನು ಹತ್ತು ದಿನಗಳಲ್ಲಿ ವಿಲೇ ಮಾಡುವಂತೆ ಜಿ.ಪಂ ಸಿಇಓ ಗಜಾನನ ಬಾಲೆ ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಸಕ್ತ ಸಾಲಿನ ಸಾಲ ಯೋಜನೆಯ ಮಾಹಿತಿ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಜಿ.ಪಂ ಉಪ ಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ಜಿಲ್ಲಾ ಅಗ್ರಣಿ ಬ್ಯಾಂಕ್‌ನ ವ್ಯವಸ್ಥಾಪಕ ರಾಜಕುಮಾರ ಹೂಗಾರ, ನಬಾರ್ಡ ಬ್ಯಾಂಕ್‌ನ ಡಿಡಿಎಂ ವಿಷ್ಣುವರ್ಧನ, ಆರ್.ಬಿ.ಐ ಎಲ್‌ಡಿಓ ಸೀಲಪ್ರೀಯಾ ಗೌತಮ, ಕೆನರಾ ಬ್ಯಾಂಕ್ ಎಜಿಎಂ ಯೋಗೇಶ ಪೂಜಾರ, ಕೆಜಿಬಿ ಬ್ಯಾಂಕ್‌ನ ಆರ್‌ಎಂ ಪರಮೇಶ್ವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಬ್ಯಾಂಕರ್ಸ್ ಗಳು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಪಾನ್ ಮಸಾಲ, ಗುಟ್ಕಾ ನಿಷೇಧ ಸಾಧ್ಯವೇ, ನಷ್ಟಕ್ಕೆ ಸರ್ಕಾರ ಸಿದ್ಧವಿದೆಯೇ?

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ, ಗುಟ್ಕಾ-ಪಾನ್ ಮಸಾಲಗಳ ಕುರಿತ ಖಡಕ್ ಎಚ್ಚರಿಕೆ, ಸರ್ಕಾರಕ್ಕೆ ಸಿಗುವ ಆದಾಯ ಕಳೆದುಕೊಳ್ಳಲು ತಯಾರಿದ್ದಾರೆಯೇ ಎಂಬ ಪ್ರಶ್ನೆಯನ್ನು; ಗುಟ್ಕಾ ಮತ್ತು ಪಾನ್ ಮಸಾಲ ಕಂಪನಿಗಳ ಮಾಲೀಕರಿಗೆ ಬೆದರಿಕೆಯಂತೆ ಕಾಣಬಹುದೆಂಬ ಅನುಮಾನವನ್ನು ಹುಟ್ಟುಹಾಕಿದರೆ ಆಶ್ಚರ್ಯವಿಲ್ಲ...

ಪಾನ್ ಮಸಾಲ, ಗುಟ್ಕಾದಲ್ಲಿ ಅಮಲು ಪದಾರ್ಥ ಬೆರೆಸಲಾಗುತ್ತಿದೆ ಎಂಬ ಮಾಹಿತಿ ಇದೆ. ಅದೇನಾದರೂ ನಿಜವೇ ಆಗಿದ್ದರೆ ರಾಜ್ಯದಲ್ಲಿ ಎಲ್ಲಾ ರೀತಿಯ ಪಾನ್ ಮಸಾಲ, ಗುಟ್ಕಾ ಪದಾರ್ಥಗಳನ್ನು ನಿಷೇಧಿಸಲಾಗುವುದು. ಇದರಿಂದ 100 ಕೋಟಿ ಆದಾಯ ನಷ್ಟವಾದರೂ ಚಿಂತಿಸಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಜನರಿಗೆ ಗುಟ್ಕಾದ ಚಟ ಹಿಡಿಸಲು ತಯಾರಿಕಾ ಕಂಪನಿಗಳೇ ಪಾನ್ ಮಸಾಲ, ಗುಟ್ಕಾಕ್ಕೆ ನಶೆ ಪದಾರ್ಥ ಸೇರ್ಪಡೆ ಮಾಡುವ ಶಂಕೆ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ. ನಶೆ ಪದಾರ್ಥಗಳ ಬಳಸಿ ಗುಟ್ಕಾ ಮಾರಾಟ ಕಾನೂನುಬಾಹಿರವಾಗಿದೆ. ಆದರೂ ಬಾಲಕರಿಂದ ಹಿಡಿದು ವೃದ್ದರವರೆಗೆ ಗುಟ್ಕಾದ ವ್ಯಸನಕ್ಕೆ ಸಿಲುಕಿದ್ದಾರೆ. ಕಡಿಮೆ ಬೆಲೆಯ ಗುಟ್ಕಾ ಅಗಿಯುವುದು, ಎಲ್ಲೆಂದರಲ್ಲಿ ಉಗಿಯುವುದು ಮಿತಿಮೀರಿ ಹೋಗುತ್ತಿದೆ.

ಇವುಗಳ ಬಳಕೆಯಿಂದ ಜನರು ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಆಸ್ಪತ್ರೆ ಖರ್ಚು ಭರಿಸದೆ ಕುಟುಂಬಗಳು ಕಣ್ಣೀರಿನಲ್ಲಿ ಕೈತೊಳೆಯುವ ಪರಿಸ್ಥಿತಿ ಎದುರಾಗಿದೆ. ಅದು ಸಮಾಜ ಮತ್ತು ಸರ್ಕಾರದ ಮೇಲೆ ಒತ್ತಡ ತರುತ್ತಿದೆ. ಹೀಗಾಗಿ ಸರ್ಕಾರಕ್ಕೆ 100 ಕೋಟಿ ಆದಾಯ ಖೋತಾ ಆದರೂ ಚಿಂತಿಸದೆ ನಿಷೇಧಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುಟ್ಕಾ ಕಂಪನಿಗಳಿಗೆ ಎಚ್ಚರಿಕೆ ನೀಡಿರುವುದು ಸರಿಯಾಗಿದೆ.

ತಂಬಾಕುಯುಕ್ತ ಗುಟ್ಕಾ ಮತ್ತು ಪಾನ್ ಮಸಾಲ ಬಾಯಿ, ನಾಲಗೆ, ಗಂಟಲು ಮತ್ತು ಅನ್ನನಾಳದ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್ ರೋಗಿಗಳ ಸಂಖ್ಯೆಯ ಬಗ್ಗೆ ಸರ್ಕಾರ ಕಳವಳ ವ್ಯಕ್ತಪಡಿಸಿ, ತಂಬಾಕು ಅಥವಾ ನಿಕೋಟಿನ್ ಹೊಂದಿರುವ ಗುಟ್ಕಾ ಮತ್ತು ಪಾನ್ ಮಸಾಲಾದ ಉತ್ಪಾದನೆ, ಸಂಗ್ರಹಣೆ, ವಿತರಣೆ ಹಾಗೂ ಮಾರಾಟವನ್ನು ಫೆಬ್ರವರಿ 2025ರಲ್ಲಿ ನಿಷೇಧಿಸಿದೆ. ಆದರೆ ಈ ನಿಷೇಧವು ವಿಧಾನಸಭೆ ಅಂಗೀಕರಿಸಿದ ಪ್ರತ್ಯೇಕ ರಾಜ್ಯ ಕಾಯ್ದೆಯ ಮೂಲಕವಲ್ಲ. ಬದಲಿಗೆ, ಕೇಂದ್ರದ ಆಹಾರ ಸುರಕ್ಷತಾ ಕಾನೂನು ಮತ್ತು ಗುಣಮಟ್ಟ ಕಾಯ್ದೆ, 2006ರ ಅಡಿಯಲ್ಲಿ ರಾಜ್ಯದ ಆಹಾರ ಸುರಕ್ಷತಾ ಆಯುಕ್ತರು ಹೊರಡಿಸುವ ಅಧಿಸೂಚನೆಗಳ ಮೂಲಕ ಜಾರಿಗೊಳಿಸಲಾಗಿದೆ.

ಅಷ್ಟೇ ಅಲ್ಲ, ಕಳೆದ ವರ್ಷ ಮೇ 2025ರಲ್ಲಿ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಬೀಡಿ, ಸಿಗರೇಟು ಮತ್ತು ತಂಬಾಕಿನ ಉತ್ಪನ್ನಗಳ ಮಾರಾಟವನ್ನು ನಿಷೇಧಿಸಲಾಗಿದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ 1,000 ರೂ. ದಂಡ ವಿಧಿಸಲಾಗುತ್ತದೆ. ಹಾಗೆಯೇ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಿದರೆ ಮತ್ತು ಗುಟ್ಕಾ ತಿಂದು ಉಗುಳಿದರೆ 1,000 ರೂ. ದಂಡ ವಿಧಿಸಲಾಗುವುದೆಂದು ರಾಜ್ಯ ಸರ್ಕಾರ ತಿಳಿಸಿದೆ. ಇದಲ್ಲದೆ, ಸಾರ್ವಜನಿಕರ ಆರೋಗ್ಯ ರಕ್ಷಿಸುವ ಹಾಗೂ ತಂಬಾಕು ನಿಯಂತ್ರಣದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವ ಕುರಿತು ವಿಶೇಷ ಕಾರ್ಯಾಚರಣೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುವುದು ಹಾಗೂ ಶಿಕ್ಷಣ ಸಂಸ್ಥೆಗಳ ಬಳಿ ತಂಬಾಕು ಮಾರಾಟ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ ದಂಡ ವಿಧಿಸಲಾಗುವುದು ಎಂದು ಪೊಲೀಸ್ ವರಿಷ್ಠಾಧಿಕಾರಿಗಳು ತಿಳಿಸಿದ್ದಾರೆ.

ಇಷ್ಟಾದರೂ, ತಂಬಾಕುರಹಿತ ಗುಟ್ಕಾ ಮತ್ತು ಪಾನ್ ಮಸಾಲಾ ಮಾರಾಟವನ್ನು ನಿರ್ಬಂಧಿಸಿಲ್ಲ. ಜೊತೆಗೆ ಆ ಸರಕು ರಾಜ್ಯದಲ್ಲಿ ಯಾವ ಪ್ರಮಾಣದಲ್ಲಿ ಮಾರಾಟವಾಗುತ್ತಿದೆ; ಅಧಿಕೃತವೆಷ್ಟು-ಅನಧಿಕೃತವೆಷ್ಟು ಎಂಬುದಕ್ಕೆ ಲೆಕ್ಕವಿಲ್ಲ. ಅದಕ್ಕೆ ಮಾದಕವಸ್ತು ಸೇರಿಸಲಾಗುತ್ತದೆ ಎಂಬುದನ್ನು ಯಾರೂ ಪರೀಕ್ಷೆಗೊಳಪಡಿಸಿಲ್ಲ. ಇದರಿಂದ ಉಂಟಾಗುವ ಆರೋಗ್ಯ ಹಾನಿ ಯಾರ ಅಂದಾಜಿಗೂ ಸಿಗುತ್ತಿಲ್ಲ. ಗುಟ್ಕಾ ವ್ಯಸನಕ್ಕೆ ಒಳಗಾಗಿ ದಾರಿ ತಪ್ಪುತ್ತಿರುವ ಯುವಜನತೆ ಮತ್ತು ಸಮಾಜ-ಸರ್ಕಾರದ ಮೇಲೆ ಬೀಳುತ್ತಿರುವ ಹೆಚ್ಚುವರಿ ಆರೋಗ್ಯ ವೆಚ್ಚ- ಇವುಗಳನ್ನು ಗಂಭೀರವಾಗಿ ಗಮನಿಸಿದರೆ, ಪಾನ್ ಮಸಾಲ ಉತ್ಪಾದನೆ ಮತ್ತು ಮಾರಾಟದ ಮೇಲೆ ಕಟ್ಟುನಿಟ್ಟಿನ ನಿರ್ಬಂಧ ಅಥವಾ ನಿಷೇಧ ಹೇರುವ ಅಗತ್ಯವಿದೆ.

ಆದರೆ, ದೇಶದ ಪಾನ್ ಮಸಾಲ ಉದ್ಯಮದ ವಾರ್ಷಿಕ ಗಾತ್ರವು ಸುಮಾರು 45ರಿಂದ 60 ಸಾವಿರ ಕೋಟಿ ಎಂದು ಅಂದಾಜಿಸಲಾಗಿದೆ. ಆ ಕಂಪನಿಗಳ ಮಾಲೀಕರು ಪ್ರಭಾವಿಗಳಾಗಿದ್ದು ಸರ್ಕಾರಗಳನ್ನೇ ನಿಯಂತ್ರಿಸುವವರಾಗಿದ್ದಾರೆ. ಕರ್ನಾಟಕ ರಾಜ್ಯವು ಈ ಉತ್ಪನ್ನಗಳ ಉತ್ಪಾದಕ ರಾಜ್ಯವಲ್ಲ, ಆದರೆ ಅಡಿಕೆ ಉತ್ಪಾದನೆಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿದೆ. ಈ ಅಡಿಕೆಯ ಬಹುಭಾಗವು ಉತ್ತರ ಭಾರತದ ಪಾನ್ ಮಸಾಲ ಮತ್ತು ಗುಟ್ಕಾ ಕಂಪನಿಗಳಿಗೆ ಪೂರೈಕೆಯಾಗುತ್ತದೆ. ರಾಜ್ಯದ ರೈತರಿಗೆ ಆರ್ಥಿಕ ಬಲ ತಂದಿದೆ. ಹಾಗೆಯೇ ಉದ್ಯಮವು ಲಕ್ಷಾಂತರ ರೈತರು, ಕಾರ್ಮಿಕರು ಮತ್ತು ವ್ಯಾಪಾರಿಗಳಿಗೆ ಉದ್ಯೋಗ ನೀಡುತ್ತಿದೆ. ಜೊತೆಗೆ ರಾಜ್ಯಕ್ಕೆ ಮತ್ತು ದೇಶಕ್ಕೆ ದೊಡ್ಡ ಮಟ್ಟದ ಆದಾಯದ ಮೂಲವಾಗಿದೆ.

ಹಾಗಾಗಿ ತಂಬಾಕುರಹಿತ ಗುಟ್ಕಾ ಮತ್ತು ಪಾನ್ ಮಸಾಲಾ ಕುರಿತ ರಾಜ್ಯ ಸರ್ಕಾರದ ಬಹಿರಂಗ ಎಚ್ಚರಿಕೆ, ನಾಜೂಕಿನ ನಡೆಯಂತೆ ಕಂಡರೆ ಆಶ್ಚರ್ಯವಿಲ್ಲ. ಹಾಗೆಯೇ ಈ ಸರಕನ್ನು ಮಾರಾಟ ಮಾಡಲು ಜನಪ್ರಿಯ ಸಿನಿಮಾ ತಾರೆಯರು ಜಾಹೀರಾತುಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಕಡಿಮೆ ಬೆಲೆ, ಸುಲಭ ಲಭ್ಯತೆ ಮತ್ತು ಜಾಹೀರಾತುಗಳಿಂದ ವಿದ್ಯಾರ್ಥಿಗಳು ಹಾಗೂ ಯುವಜನತೆ ದಾರಿತಪ್ಪಲು, ಮಾದಕ ವಸ್ತುಗಳ ವ್ಯಸನಿಗಳಾಗಲು ಪ್ರೇರೇಪಿಸಿದಂತಿದೆ. ಗುಟ್ಕಾ ಮತ್ತು ಪಾನ್ ಮಸಾಲಗಳಿಗೆ ಮಾದಕ ಅಥವಾ ನಿಷೇಧಿತ ರಾಸಾಯನಿಕಗಳನ್ನು ಬೆರೆಸಿರುವುದು ಕಂಡುಬಂದರೆ ಸರ್ಕಾರ ಕ್ರಮ ಕೈಗೊಳ್ಳಬಹುದು. ಆದರೆ, ಕ್ರಮ ಕೈಗೊಂಡಿದ್ದು ಇಲ್ಲಿಯವರೆಗೂ ಕಂಡುಬಂದಿಲ್ಲ.

ಹಾಗೆಯೇ ಗುಟ್ಕಾ-ಪಾನ್ ಮಸಾಲದ ಮೇಲೆ ಕೇವಲ ಕ್ರಮ ಕೈಗೊಳ್ಳುವುದು ಹಾಗೂ ನಿಷೇಧ ಹೇರುವುದು ಸಾಕಾಗುವುದಿಲ್ಲ. ಪರಿಣಾಮಕಾರಿ ಕಾನೂನು ಜಾರಿ, ವ್ಯಸನಮುಕ್ತ ಕಾರ್ಯಕ್ರಮಗಳು, ಸಾರ್ವಜನಿಕ ಜಾಗೃತಿ, ಅಪ್ರಾಪ್ತರ ರಕ್ಷಣೆ ಮತ್ತು ಅಕ್ರಮ ವ್ಯಾಪಾರದ ನಿಯಂತ್ರಣ ಮೊದಲು ಆಗಬೇಕು. ಶಾಲೆಗಳು, ಮಾಧ್ಯಮಗಳು ಮತ್ತು ಆರೋಗ್ಯ ಇಲಾಖೆಯ ಮೂಲಕ ನಿರಂತರ ಅರಿವು ಮೂಡಿಸಬೇಕು. ಗಡಿ ಪ್ರದೇಶಗಳು ಮತ್ತು ಉತ್ಪಾದನಾ ಘಟಕಗಳ ಮೇಲೆ ಪರಿಣಾಮಕಾರಿ ನಿಗಾ ಇರಬೇಕು. ಸಾರ್ವಜನಿಕ ಆರೋಗ್ಯ, ಕುಟುಂಬದ ಆರ್ಥಿಕ ಸ್ಥಿತಿ, ಯುವಜನರ ಭವಿಷ್ಯ ಮತ್ತು ಸಾರ್ವಜನಿಕ ಸ್ವಚ್ಛತೆಯ ಮೇಲೆ ವ್ಯಾಪಕ ದುಷ್ಪರಿಣಾಮ ಬೀರುವುದರಿಂದ ಇದನ್ನು ಸಾಮಾಜಿಕ ಪಿಡುಗು ಎಂದು ಪರಿಗಣಿಸಬೇಕು. ಇವೆಲ್ಲವನ್ನು ಅಳವಡಿಸಿಕೊಂಡ ಕಾನೂನು ಜಾರಿಗೆ ತರುವುದರಿಂದ ಮಾತ್ರ ಯಶಸ್ಸು ಕಾಣಬಹುದಾಗಿದೆ.

ಆ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ, ಗುಟ್ಕಾ-ಪಾನ್ ಮಸಾಲದಲ್ಲಿ ಅಮಲಿನ ಅಂಶ ಪತ್ತೆಯಾದ್ರೆ, ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ನಿಮ್ಮಿಂದ ಸರ್ಕಾರಕ್ಕೆ ಹೆಚ್ಚೆಂದರೆ 100 ಕೋಟಿ ಆದಾಯ ಬರಬಹುದು. ಅದು ಹೋದರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದಿರುವುದು, ಮೇಲ್ನೋಟಕ್ಕೆ ಖಡಕ್ ಹೇಳಿಕೆಯಂತೆ ಕಂಡರೂ, ಸರ್ಕಾರಕ್ಕೆ ಸಿಗುವ ಆದಾಯ ಕಳೆದುಕೊಳ್ಳಲು ತಯಾರಿದ್ದಾರೆಯೇ ಎಂಬ ಪ್ರಶ್ನೆಯನ್ನು; ಗುಟ್ಕಾ ಮತ್ತು ಪಾನ್ ಮಸಾಲ ಕಂಪನಿಗಳ ಮಾಲೀಕರಿಗೆ ಬೆದರಿಕೆಯಂತೆ ಕಾಣಬಹುದೆಂಬ ಅನುಮಾನವನ್ನು ಹುಟ್ಟುಹಾಕಲಿದೆ. ಇದೆಲ್ಲದಕ್ಕೂ ಉತ್ತರ ಮುಂದಿನ ದಿನಗಳೇ ಹೇಳಬಲ್ಲವು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಕೈಕೊಟ್ಟ ಮುಂಗಾರು: ಬಾಡಿತು ರೈತರ ಬದುಕು



ಮಳೆ ನಂಬಿ ಬಿತ್ತನೆ ಮಾಡಿದ್ದ ರೈತರು ಈಗ ಕೈ ಸುಟ್ಟಿಕೊಂಡಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವುದು, ಬರಗಾಲ ನಿರ್ವಹಣಾ ನಿಧಿಯನ್ನು ಸಕಾಲದಲ್ಲಿ ಬಳಸುವುದು ಮತ್ತು ರೈತರಿಗೆ ಸೂಕ್ತ ಪರಿಹಾರ ಘೋಷಿಸುವುದು ಅಗತ್ಯವಾಗಿದೆ.

ರಾಜ್ಯದಲ್ಲಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣ ತಲುಪದೇ ಇರುವುದುದು ರೈತರಿಗೆ ನಿರಾಶೆ ತರಿಸಿದೆ. ಅದರಲ್ಲೂ ದಕ್ಷಿಣ ಭಾಗದಲ್ಲಿ ಆಗಾಗ ಮಳೆಯಾಗುತ್ತಿದ್ದರೂ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಮಳೆ ಕೊರತೆ ಎದುರಾಗಿದ್ದು, ಅನ್ನದಾತರನ್ನು ಆತಂಕಕ್ಕೀಡು ಮಾಡಿದೆ.

ವಿಜಯನಗರ ಜಿಲ್ಲೆಯಲ್ಲೂ ಮುಂಗಾರು ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಸಕಾಲಕ್ಕೆ ಮಳೆಯಾಗಿದ್ದರೆ ಇಷ್ಟೊತ್ತಿಗೆ ತುಂಗಭದ್ರಾ, ಡ್ಯಾಂ ಭರ್ತಿಯಾಗಬೇಕಿತ್ತು. ಆದರೆ ಮಳೆ ಕೊರತೆಯಿಂದ ಡ್ಯಾಂನಲ್ಲಿ ನೀರು ಸಂಗ್ರಹವಾಗಿಲ್ಲ. ಇತ್ತ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಮಳೆಯನ್ನೇ ನಂಬಿದ್ದ ಕೃಷಿಕರು ಚಿಂತೆಗೀಡಾಗಿದ್ದು, ಮಳೆ ಯಾವಾಗ ಬರುತ್ತದೆ ಎಂದು ಆಗಸದತ್ತ ಮುಖ ಮಾಡಿ ಕೂರುವಂತಾಗಿದೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲೇ 8 ಲಕ್ಷದ 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ. ಬಹುತೇಕ ರೈತರು ಮೆಕ್ಕೆಜೋಳವನ್ನೇ ಬಿತ್ತನೆ ಮಾಡಿದ್ದಾರೆ. ಇನ್ನೂ ಅನೇಕ ರೈತರ ಬಿತ್ತನೆ ಮಾಡಲು ಬೀಜ, ಗೊಬ್ಬರ ತಂದಿಟ್ಟು ಮಳೆಗಾಗಿ ಕಾಯುವಂತಾಗಿದೆ. ಈಗಾಗಲೇ ಬಿತ್ತಿದ ಬೆಳೆಗಳು ಮಳೆಯಾಗದೇ ಒಣಗಿ ಹೋಗಿವೆ. ಲಕ್ಷಾಂತರ ರೂಪಾಯಿ ಸಾಲ ಮಾಡಿ ಬಿತ್ತಿದ ಬೆಳೆಗಳೆಲ್ಲ ಸುಟ್ಟು ಹೋಗಿದ್ದು, ರೈತರ ಬದುಕು ದುಸ್ತರವಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಹಗರಿಬೊಮ್ಮನಹಳ್ಳಿ ರೈತರ ಸಂಘದ ತಾಲೂಕು ಅಧ್ಯಕ್ಷ ಬಸನಗೌಡ ಅವರು, ''ಈಗಾಗಲೇ ರೈತರು ಬಿತ್ತಿದ ಬೆಳೆಗಳೆಲ್ಲ ಒಣಗಿಹೋಗಿವೆ. ಕೂಡಲೇ ತಾಲೂಕನ್ನು ಬರಪೀಡಿತವೆಂದು ಘೋಷಿಸಿ, ರೈತರ ಬೆಳೆಹಾನಿ ಸಮೀಕ್ಷೆ ಮಾಡಿ ಅವರಿಗೆ ಪರಿಹಾರ ಕೊಡಬೇಕು. ಇನ್ನೊಂದು ವಾರದಲ್ಲಿ ಈ ತಾಲೂಕನ್ನು ಬರಪೀಡಿತವೆಂದು ಘೋಷಣೆ ಮಾಡದಿದ್ದರೆ ದೊಡ್ಡ ಮಟ್ಟದ ಹೋರಾಟ ಮಾಡಲಾಗುವುದು'' ಎಂದು ಎಚ್ಚರಿಕೆ ನೀಡಿದ್ದಾರೆ.

ಮತ್ತೊಂದೆಡೆ ಹಗರಿಬೊಮ್ಮನಹಳ್ಳಿ ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್ ಬಿ ಪಾಟೀಲ್ ಅವರು ಪ್ರತಿಕ್ರಿಯೆ ನೀಡಿದ್ದು, ''ಸಕಾಲಕ್ಕೆ ಮಳೆಯಾಗದೇ ರೈತರ ಬೆಳೆಗಳೆಲ್ಲವೂ ಹಾಳಾಗಿವೆ. ಇನ್ನು ಎರಡ್ಮೂರು ದಿನಗಳಲ್ಲಿ ಮಳೆಯಾಗುವ ಮುನ್ಸೂಚನೆ ಇದೆ. ಹೀಗಾಗಿ, ಪರಿಸ್ಥಿತಿ ನೋಡಿಕೊಂಡು ರೈತರಿಗೆ ಅನುಕೂಲವಾಗುವಂತಹ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ, ಬಿತ್ತನೆಬೀಜ, ಗೊಬ್ಬರ ತಂದಿಟ್ಟುಕೊಂಡು ಬಿತ್ತನೆಗೆ ಕಾಯುತ್ತಿರುವ ರೈತರು ಪರಿಸ್ಥಿತಿ ನೋಡಿಕೊಂಡು ನಿರ್ಧಾರ ಮಾಡಬೇಕು. ಅವಸರದಲ್ಲಿ ಬಿತ್ತನೆ ಮಾಡಿ ತೊಂದರೆ ಅನುಭವಿಸುವುದು ಬೇಡ'' ಎಂದು ರೈತರಲ್ಲಿ ಮನವಿ ಮಾಡಿದರು.

ಮಳೆ ನಂಬಿ ಬಿತ್ತನೆ ಮಾಡಿದ್ದ ರೈತರು ಈಗ ಕೈ ಸುಟ್ಟಿಕೊಂಡಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತುರ್ತು ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸುವುದು, ಬರಗಾಲ ನಿರ್ವಹಣಾ ನಿಧಿಯನ್ನು ಸಕಾಲದಲ್ಲಿ ಬಳಸುವುದು ಮತ್ತು ರೈತರಿಗೆ ಸೂಕ್ತ ಪರಿಹಾರ ಘೋಷಿಸುವುದು ಅಗತ್ಯವಾಗಿದೆ. ಜತೆಗೆ, ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ದೀರ್ಘಕಾಲಿಕ ಯೋಜನೆಗಳಾದ ಜಲಸಂರಕ್ಷಣೆ, ಮಳೆನೀರು ಸಂಗ್ರಹಣೆ ಮತ್ತು ಬೆಳೆ ವಿಮೆಯ ಸುಧಾರಣೆಗಳನ್ನು ತೀವ್ರಗತಿಯಲ್ಲಿ ಜಾರಿಗೊಳಿಸಬೇಕು.

ರೈತರು ದೇಶದ ಬೆನ್ನೆಲುಬು. ಅವರ ಆತಂಕವನ್ನು ನಿವಾರಿಸದಿದ್ದರೆ ರಾಜ್ಯದ ಕೃಷಿ ಉತ್ಪಾದನೆಯ ಮೇಲೆ ದೊಡ್ಡ ಪ್ರಭಾವ ಬೀಳುವುದು ಖಚಿತ. ಆದ್ದರಿಂದ ಎಲ್ಲ ಹಂತಗಳಲ್ಲೂ ತ್ವರಿತ ಮತ್ತು ಸಮರ್ಥನೀಯ ಕ್ರಮಗಳು ಅನಿವಾರ್ಯವಾಗಿವೆ.

ಅರಸು 'ಜನ್ಮಭೂಮಿ'-'ಕರ್ಮಭೂಮಿ' ದತ್ತು ಪಡೆದು ಮೋಸ ಮಾಡಿತೇ ಸರ್ಕಾರ?

ಅರಸು ಹೆಸರು ಹೇಳದ ಒಬ್ಬ ರಾಜಕಾರಣಿ ರಾಜ್ಯದಲ್ಲಿಲ್ಲ ಎಂದರೆ ಅದು ಅತಿಶಯೋಕ್ತಿಯಲ್ಲ. ರಾಜ್ಯದಲ್ಲಿ ಹಲವು ಮುಖ್ಯಮಂತ್ರಿಗಳು ಬಂದಿದ್ದಾರೆ, ಹೋಗಿದ್ದಾರೆ. ಆದರೆ, ಇಂದಿಗೂ ಜನ ಮಾನಸದಲ್ಲಿ ಉಳಿದುಕೊಂಡಿರುವ ಏಕೈಕ ವ್ಯಕ್ತಿ ಕರ್ನಾಟಕ ಏಕೀಕರಣ ಕರ್ತೃ ಡಿ. ದೇವರಾಜ ಅರಸು. ಹಿಂದುಳಿದ ವರ್ಗಗಳಿಂದ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ ಮೊದಲ ವ್ಯಕ್ತಿ. ಐದು ವರ್ಷ ಪೂರ್ಣಗೊಳಿಸಿದ ಮೊದಲಿಗರೂ ಹೌದು. ಇಂತಹ ವ್ಯಕ್ತಿಯನ್ನು ಸಮಾಜವಾದಿ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯನವರು ಮತ್ತು ಅವರ ಕಾಂಗ್ರೆಸ್ ಸರ್ಕಾರವೇ ಮರೆತಿರುವುದು ದುರಂತ.

ದೇವರಾಜ ಅರಸು ಎಂಬ ಹೆಸರೇ ಒಂದು ಶಕ್ತಿ. ಮಾಜಿ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ಪಾಲಿನ ಆಶಾಕಿರಣ ಅರಸು ನಾಡಿಗಾಗಿ ಶ್ರಮಿಸಿದ, ದೀನ-ದಲಿತರ, ಹಿಂದುಳಿದವರ ಅಸ್ಮಿತೆಗಾಗಿ ಹೋರಾಡಿದ ಮಹಾನ್ ನಾಯಕ. ಆದರೆ ಇಂದು ನಾಯಕನ ಮನೆ ಅನಾಥವಾಗಿದೆ. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿರುವ ಅರಸು ಅವರ ಹಳೆಯ ಮನೆ, ಇಂದು ನಿರ್ವಹಣೆಯಿಲ್ಲದೆ ನಶಿಸಿ ಹೋಗುವ ಸ್ಥಿತಿಯಲ್ಲಿದೆ. ಕೆಂಪು ಹೆಂಚಿನ ನಾಲ್ಕು ಕಂಬದ ಆ ಹಳೆಯ ತೊಟ್ಟಿ ಮನೆ, ಒಂದು ಕಾಲದಲ್ಲಿ ರಾಜಕೀಯ ಚಟುವಟಿಕೆಗಳ ಕೇಂದ್ರಬಿಂದುವಾಗಿತ್ತು. ಅಂದಿನ ವೈಭವದ ಸಾಕ್ಷಿಗಳಂತಿರುವ 40ಕ್ಕೂ ಹೆಚ್ಚು ಫೋಟೊಗಳು ಈಗ ದೂಳಿನ ಪದರದಡಿ ಮರೆಯಾಗಿವೆ. ಗೋಡೆಗಳು ಬಣ್ಣ ಕಳೆದುಕೊಂಡು ಕಳೆಗುಂದಿವೆ. ಅಡುಗೆ ಮನೆಯ ಮೂಲೆಯಲ್ಲೊಂದು ಫಲಕ ಮಾತ್ರ ಆ ಮನೆ ಅರಸು ಅವರದ್ದು ಎಂದು ಸಾಕ್ಷಿ ಹೇಳುತ್ತಿದೆ.

ಅರಸು ಅವರ ಹುಟ್ಟೂರಾದ ಬೆಟ್ಟದತುಂಗಾದಲ್ಲಿ ಹೆಜ್ಜೆಯಿಟ್ಟಲ್ಲೆಲ್ಲಾ ಗುಂಡಿ. ಇನ್ನು ಗ್ರಾಮದ ದೇವಸ್ಥಾನಗಳ ಸ್ಥಿತಿಯಂತೂ ಕೇಳುವವರಿಲ್ಲ; ಸೂರಿದ್ದರೂ ಮಳೆಗಾಲದಲ್ಲಿ ಸೋರುವ ಪರಿಸ್ಥಿತಿಗೆ ತಲುಪಿವೆ. ಪಾರಂಪರಿಕ ಮಹತ್ವವಿರಬೇಕಾದ ತಾಣಗಳು ಇಂದು ನಿರ್ವಹಣೆಯಿಲ್ಲದೆ ನಶಿಸುತ್ತಿವೆ.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ, ದೇವರಾಜ ಅರಸು ಜನ್ಮ ಶತಮಾನೋತ್ಸವ ಕಾರ್ಯಕ್ರಮವನ್ನು 2015ರ ಆಗಸ್ಟ್ 20ರಂದು ಅರಸು ಹುಟ್ಟೂರು ಬೆಟ್ಟದತುಂಗಾ ಹಾಗೂ ಕರ್ಮಭೂಮಿ ಕಲ್ಲಹಳ್ಳಿ ಗ್ರಾಮದಲ್ಲಿ ಆಚರಿಸಿತ್ತು. ಅಂದು ಎರಡೂ ಗ್ರಾಮವನ್ನು ದತ್ತುಪಡೆದು, ಮಾದರಿ ಗ್ರಾಮ ಮಾಡುವುದಕ್ಕಾಗಿ, ಪ್ರತಿ ಗ್ರಾಮಕ್ಕೂ 10 ಕೋಟಿ ಅನುದಾನವನ್ನು ಘೋಷಿಸಲಾಗಿತ್ತು. ದತ್ತು ಸ್ವೀಕರಿಸಿ 11 ವರ್ಷಗಳು ಕಳೆದಿದೆ. ಆದರೆ ಗ್ರಾಮಗಳು ಮಾತ್ರ ತಂದೆ-ತಾಯಿ ಇಲ್ಲದೆ ಅನಾಥವಾಗಿವೆ.

ತಂಡ ವರದಿಗಾಗಿ ಪ್ರವೇಶಿಸಿದಾಗ ಕಾಣಿಸಿದ್ದು, ಕಳೆದ ಹತ್ತು ವರ್ಷಗಳ ಹಿಂದೆ ಸುಣ್ಣ-ಬಣ್ಣ ಕಂಡಿದ್ದು ಬಿಟ್ಟರೆ ಬೇರೇನೂ ಆಗಿಲ್ಲ. ಅರಸು ಅವರು ವಾಸವಿದ್ದ ಮನೆ ಎನ್ನುವ ಸಣ್ಣ ನಾಮಫಲಕವೂ ಇಲ್ಲ. ಅರಸು ಅವರ ದೌರ್ಭಾಗ್ಯವೋ, ಇಲ್ಲ ಹುಣಸೂರಿನ ದುರ್ದೈವವೋ? ತಾಲೂಕು ಆಡಳಿತ ಅರಸು ಅವರು ಬಾಳಿ ಬದುಕಿದ ಮನೆಗೆ ಸುಣ್ಣ ಬಣ್ಣ ತೋರಿಸಿಲ್ಲ. ಇತ್ತ ಹಕ್ಕಿಗಳು ತೂರಿದರೆ ಅತ್ತ ಹಾದುಹೋಗಬಹುದು. ಮನೆಯೊಳಗೇ ಆಕಾಶ ನೋಡಬಹುದು. ಮನೆಯೆಲ್ಲಾ ದುಂಬು ತುಂಬಿ ಜೇಡ ಕಟ್ಟಿದೆ. ಹೆಂಚೆಲ್ಲಾ ಒಡೆದು ಹೋಗಿದೆ. ಕೈಯಾಡಿಸಿ ಅದೆಷ್ಟು ವರ್ಷ ಕಳೆಯಿತೋ. ಗೋಡೆಯೆಲ್ಲಾ ಬಿರುಕು ಬಿಟ್ಟಿದೆ. ಮಳೆ ಬಂದರೆ ನೀರೆಲ್ಲ ಮನೆಯೊಳಕ್ಕೆ. ಇವತ್ತೋ ನಾಳೆಯೋ ಕುಸಿಯುವ ಹಂತಕ್ಕೆ ಬಂದಿರುವ ಮನೆಯ ರಕ್ಷಣೆಗೆ ಯಾರೊಬ್ಬರೂ ಧಾವಿಸಿಲ್ಲ.

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಕಲ್ಲಹಳ್ಳಿ ಗ್ರಾಮದ ಅಭಿವೃದ್ಧಿಗೆ 1 ಕೋಟಿ ಅನುದಾನ ಬಿಡುಗಡೆ ಮಾಡಿದ್ದರು. ಆ ಹಣದಲ್ಲಿ ಸಾಹಿತಿ ಚದುರಂಗ ಅವರ ಮನೆಯನ್ನು ಕೆಡವಿ ಚದುರಂಗ ಭವನವನ್ನು ನಿರ್ಮಿಸಲಾಯಿತು. ಇಂದು ಚದುರಂಗ ಭವನ ಪಾರಿವಾಳಗಳ ವಾಸಸ್ಥಳವಾಗಿದೆ. ಚದುರಂಗ ಭವನ ನಿರ್ಮಿಸಿದಾಗಿನಿಂದಲೂ ಬಳಕೆಗೆ ಸಿಕ್ಕಿಲ್ಲ. ಗ್ರಾಮದ ಯಾರಿಗೂ ಮಾಹಿತಿ ಕೊಡದೆ



ಭೂಮಿಯನ್ನು ಅಗೆದು ನೆಲ ಅಂತಸ್ತಿನಲ್ಲಿ ಭವನ ನಿರ್ಮಿಸಿದ್ದಾರೆ. ಮಳೆಯಾದರೆ ಭವನದ ನೆಲದಲ್ಲಿ ನೀರು ನಿಲ್ಲುತ್ತದೆ. ಕಟ್ಟಡ ನಿರ್ವಹಣೆಯ ಜವಾಬ್ದಾರಿಯನ್ನು ಕೂಡ ಸರ್ಕಾರ ತೆಗೆದುಕೊಂಡಿಲ್ಲ. ಇನ್ನೊಂದೆರಡು ವರ್ಷ ಹೀಗೆ ಬಿಟ್ಟರೆ ಇಡೀ ಭವನವೇ ಕಳಚಿ ಬೀಳುತ್ತದೆ.

ಇದಕ್ಕಿಂತಲೂ ದುರಂತವೆಂದರೆ, 2015ರಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಕಂದಾಯ ಸಚಿವರಾಗಿದ್ದ ವಿ. ಶ್ರೀನಿವಾಸ ಪ್ರಸಾದ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಹೆಚ್. ಆಂಜನೇಯ, ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಪಶು ಸಂಗೋಪನಾ ಸಚಿವ ಟಿ. ಬಿ. ಜಯಚಂದ್ರ, ಶಾಸಕ ಹೆಚ್. ಪಿ. ಮಂಜುನಾಥ್ ಇವರುಗಳ ಸಮ್ಮುಖದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೆರವೇರಿಸಿದ್ದ ಶಿಲಾನ್ಯಾಸ ಫಲಕ ಇವತ್ತು ಯಾರಿಗೂ ಕಾಣದ ಹಾಗೆ ಅರಸು ಅವರು ಬಾಳಿ ಬದುಕಿದ ಮನೆಯ ಅಡುಗೆ ಕೋಣೆಯಲ್ಲಿ ಇದೆ. ವೇದಿಕೆ ಮೇಲೆ ಉದ್ಘಾಟನೆಗೊಂಡಿದ್ದು ಬಿಟ್ಟರೆ, ಫಲಕ ಯಾರಿಗೂ ಕಾಣದ ಹಾಗೇ ಅಡುಗೆ ಕೋಣೆಯಲ್ಲಿ ಮುಚ್ಚಿಡಲಾಗಿದೆ.

''ಅರಸು ಅವರಿಗೆ ಕಲ್ಲಹಳ್ಳಿ ಎಂದರೆ ಎಲ್ಲಿಲ್ಲದ ಪ್ರೀತಿ. ಅದರಲ್ಲೂ, ಕರ್ಮಭೂಮಿಯ ಜೊತೆ ತಮ್ಮ ಹೆಸರು ಸೇರಿ ಅರಸು ಕಲ್ಲಹಳ್ಳಿ ಎಂದು ಕರೆಯುತ್ತಿದ್ದರೆ, ಅವರಿಗೆ ವಿಶೇಷ ರೋಮಾಂಚನವೇ. ಅರಸು ಅವರು ಊರಿಗೆ ಬಂದ ತಕ್ಷಣ ಮೊದಲು ಕಾಲಿನ ಚಪ್ಪಲಿ ಕಳಚಿ ಮನೆ ಪಕ್ಕದ ದನದ ಕೊಟ್ಟಿಗೆಗೆ ತೆರಳಿ ಎತ್ತು, ಕರು, ಹಸುಗಳ ಮೈತಡವಿ, ಮುದ್ದಿಸುತ್ತಿದ್ದರು. ಮನಸ್ಸಿಗೆ ಸಮಾಧಾನ ಆಗುವ ತನಕ ಕೊಟ್ಟಿಗೆಯಲ್ಲಿ ಕಾಲ ಕಳೆದು, ಆಗತಾನೆ ಕರೆದ ಹಸುವಿನ ಹಸಿ ಹಾಲು ಕುಡಿದು ತಲೆ ಬಾಗಿ ಮನೆಯೊಳಗೆ ಕಾಲಿಡುತ್ತಿದ್ದರು'' ಎಂದು ನೆನೆಯುತ್ತಾರೆ ಗ್ರಾಮದ ಮುಖ್ಯಸ್ಥ ಮಹಾದೇವಪ್ಪ.

ಅರಸು ಅವರ ಕನಸಿನ ಕೂಸಾಗಿದ್ದ ದೊಡ್ಡಕೆರೆಗೆ ಹಾಗೂ ಇನ್ನಿತರ 22 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇಂದಿಗೂ ನೆನೆಗುದಿಗೆ ಬಿದ್ದಿದೆ. ಕೆರೆಗಳು ಸಂಪೂರ್ಣ ಬತ್ತಿ ಹೋಗಿವೆ. ಮಳೆ ಬಂದರೆ ಮಾತ್ರ ನೀರು, ಇಲ್ಲದೆ ಹೋದರೆ ಕೆರೆಗೂ ನೀರಿಲ್ಲ, ಹೊಲಗಳಿಗೂ ನೀರಿಲ್ಲ. ಕೃಷಿ ಪ್ರಧಾನವಾದ ಗ್ರಾಮಕ್ಕೆ ನೀರಿನ ಸಮಸ್ಯೆಯಿರಕೂಡದು ಎಂಬುದು ಅರಸು ಅವರ ಬಯಕೆಯಾಗಿತ್ತು. ಆದರೀಗ ಇಡೀ ಗ್ರಾಮ ನೀರಿಲ್ಲದೆ ಒಣಗುತ್ತಿದೆ.

''ಅರಸು ಅವರ ಮನೆಯನ್ನು ಮ್ಯೂಸಿಯಂ ಮಾಡ್ತೀವಿ, ಸಂಶೋಧನ ಯೋಗ್ಯವಾದ ಕೇಂದ್ರ ಮಾಡ್ತೀವಿ ಅಂತೆಲ್ಲ ಸರ್ಕಾರ ಹೇಳಿತ್ತು. ಅದ್ಯಾವುದನ್ನು ಸರ್ಕಾರ ಮಾಡುವಂತೆ ಕಾಣುತ್ತಿಲ್ಲ. ಅರಸು ಅವರು ಬಾಳಿ ಬದುಕಿದ್ದ ಮನೆಯನ್ನು ಉಳಿಸಿಕೊಟ್ಟರೆ ಸಾಕು. 10 ಕೋಟಿ ಘೋಷಣೆ ಮಾಡಿ ಇದುವರೆಗೆ ನಯಾಪೈಸೆ ಕೆಲಸ ಆಗಲಿಲ್ಲ. ಮನೆ ಬಿದ್ದೋದ ಮೇಲೆ ಯಾವ ಕೆಲಸ ಮಾಡಿ ಏನು ಪ್ರಯೋಜನ. ಎಲ್ಲರೂ ಅರಸು ಅವರ ಹೆಸರನ್ನು ಹೇಳಿ ರಾಜಕೀಯ ಮಾಡ್ತಾರೆ ಹೊರತು, ಅರಸು ಹೆಸರಿಗೆ ನ್ಯಾಯ ಕೊಡುತ್ತಿಲ್ಲ'' ಎಂದು ಗ್ರಾಮದ ಮುಖ್ಯಸ್ಥ ಮಹಾದೇವಪ್ಪ ಬೇಸರ ವ್ಯಕ್ತಪಡಿಸಿದರು.

ಇನ್ನೊಂದೆಡೆ, ಪಿರಿಯಾಪಟ್ಟಣದ ಬೆಟ್ಟದತುಂಗಾ ಗ್ರಾಮವಂತೂ ಅಭಿವೃದ್ಧಿಗಾಗಿ ಸರ್ಕಾರ ಕೊಟ್ಟ ಭರವಸೆಗಳು ಇಂದಲ್ಲ ನಾಳೆ ತಲುಪಬಹುದೇನೋ ಎಂಬ ಆಸೆಯಲ್ಲಿದೆ. 2015ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಗ್ರಾಮಕ್ಕೆ ಬಂದು ಕಾರ್ಯಕ್ರಮ ಮಾಡಿ ಆಶ್ವಾಸನೆ ಕೊಟ್ಟಿದ್ದು ಬಿಟ್ಟರೆ, ಸಣ್ಣ ಅಭಿವೃದ್ಧಿ ಕೆಲಸವೂ ಗ್ರಾಮಕ್ಕೆ ಆಗಿಲ್ಲ ಎಂದು ಗ್ರಾಮಸ್ಥರು ಬೇಸರ ವ್ಯಕ್ತಪಡಿಸಿದರು.

ಬೆಟ್ಟದತುಂಗಾ ಗ್ರಾಮದಲ್ಲಿ ಅರಸು ಜನ್ಮಶತಮಾನೋತ್ಸವ

ಬೆಟ್ಟದತುಂಗಾ ಗ್ರಾಮದಲ್ಲಿ ಅರಸು ಅವರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಟ್ಟದತುಂಗಾ ಗ್ರಾಮಕ್ಕೆ ಪ್ರವೇಶಿಸುವಾಗ, ಬಲಬದಿಯಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಆದರೆ ಗ್ರಾಮಕ್ಕೆ ಬರುವ ಬಸ್ ಮಾತ್ರ ಇಂದಿಗೂ ಗ್ರಾಮಸ್ಥರಿಗೆ ಸಿಗುತ್ತಿಲ್ಲ. ''ಅರಸು ಅವರ ಕಾಲದಲ್ಲಿಯೇ ಬೆಟ್ಟದತುಂಗಾ ಬೆಂಗಳೂರು ಬಸ್ಸೆಂದರೆ ಇಡೀ ಕರ್ನಾಟಕಕ್ಕೆ ಪರಿಚಿತವಾಗಿತ್ತು. ಇಂದು ಆ ಬಸ್ ಹೆಸರು ಮಾತ್ರ ಬೆಟ್ಟದತುಂಗಾ ಬೆಂಗಳೂರು ಎಂದು. ಆದರೆ ಬೆಳಗಿನ ಜಾವ 5 ಗಂಟೆಗೆ ಬಸ್ ಬೇರೆ ಊರಿಂದ ಹೊರಡುತ್ತದೆ'' ಎಂದು ಗ್ರಾಮಸ್ಥರು ಆರೋಪಿಸಿದರು.

ಸಿದ್ದರಾಮಯ್ಯನವರು ಬೆಟ್ಟದತುಂಗಾ ಗ್ರಾಮವನ್ನು ದತ್ತು ಪಡೆದು, ಮಾದರಿ ಗ್ರಾಮವಾಗಿ ನಿರ್ಮಾಣ ಮಾಡಲು 10 ಕೋಟಿ ಅನುದಾನವನ್ನು ನೀಡಿದ್ದರು. ಆದರೆ ಆ ಹತ್ತು ಕೋಟಿ ಹಣದಲ್ಲಿ, 7.5 ಕೋಟಿಯಷ್ಟು ಹಣವನ್ನು ತಾಲ್ಲೂಕು ಕೇಂದ್ರ ಪಿರಿಯಾಪಟ್ಟಣದಲ್ಲಿ ದೇವರಾಜ ಅರಸು ಭವನವನ್ನು ನಿರ್ಮಾಣ ಮಾಡಲಾಗಿದೆ. ಗ್ರಾಮಕ್ಕೆಂದು ಕೊಟ್ಟ ಹಣವನ್ನು ತಾಲ್ಲೂಕು ಕೇಂದ್ರಕ್ಕೆ ವರ್ಗಾಯಿಸಲಾಗಿದೆ. ಇನ್ನುಳಿದ 2.5 ಕೋಟಿ ಹಣದಲ್ಲಿ, ಗ್ರಾಮದ ಎರಡು ಬದಿಯಲ್ಲಿ ದ್ವಾರವನ್ನು, ಗ್ರಾಮಪಂಚಾಯಿತಿ ಪಕ್ಕದಲ್ಲಿ ಅರಸು ಅವರ ಪ್ರತಿಮೆಯನ್ನು, ವೀರಭದ್ರೇಶ್ವರ ಮತ್ತು ಈಶ್ವರ ದೇವಸ್ಥಾನದ ದುರಸ್ತಿ ಕಾರ್ಯವನ್ನು, ದೇವಸ್ಥಾನದ ಒಂದು ಬದಿಯಲ್ಲಿ ಸಿಮೆಂಟ್ ರಸ್ತೆಯನ್ನು ಮಾಡಲಾಗಿದೆ. ಆದರೆ ಇದ್ಯಾವುದು ಕೂಡ ಸಂಪೂರ್ಣ ಉಪಯೋಗಕ್ಕೆ ಬರುವ ರೀತಿಯಲ್ಲಿ ನಿರ್ಮಾಣ ಮಾಡಿಕೊಟ್ಟಿಲ್ಲವೆಂದು ಗ್ರಾಮಸ್ಥರು ಆರೋಪಿಸುತ್ತಾರೆ.

''ಬೆಟ್ಟದತುಂಗಾ ಗ್ರಾಮದಲ್ಲಿ ಅರಸು ಅವರ ವಂಶಸ್ಥರು ಹೆಚ್ಚಿದ್ದಾರೆ. ಇಡೀ ಕರ್ನಾಟಕದಲ್ಲಿ ಅರಸು ವಂಶಸ್ಥರು ಹೆಚ್ಚಿರುವ ಗ್ರಾಮ ಇದೊಂದೆ. ಗ್ರಾಮದ ಅಭಿವೃದ್ಧಿಗಾಗಿ ಕೊಟ್ಟ ಹಣವನ್ನು ಗ್ರಾಮಕ್ಕಾಗಿಯೇ ಉಪಯೋಗಿಸದೆ ಅಧಿಕಾರಿಗಳು ಬೇಕಾಬಿಟ್ಟಿ ಕೆಲಸ ಮಾಡಿದ್ದಾರೆ'' ಎನ್ನುತ್ತಾರೆ ಗ್ರಾಮದ ಪ್ರಮುಖರಾದ ಅರುಣ್ ರಾಜೇ ಅರಸ್.

ಅರಸು ಈ ನಾಡು ಕಂಡಂತಹ ಅಪರೂಪದ ರಾಜಕಾರಣಿ. ಮೈಸೂರು ರಾಜ್ಯದ ಸಂದರ್ಭದಲ್ಲಿ ಗ್ರಾಮ(ಮಂಡಲ) ಪಂಚಾಯತಿಯಿಂದ ಹಿಡಿದು ಮುಖ್ಯಮಂತ್ರಿಗಾದಿಗೆ ಏರಿ, ಉತ್ತಮ ಆಡಳಿತದಿಂದ, ತಮ್ಮ ವಿವೇಕಯುತ ತೀರ್ಮಾನಗಳಿಂದ ಜನ ಸಾಮಾನ್ಯರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದವರು. ಶೋಷಣೆ ಹಾಗೂ ಬಡತನ ನಿವಾರಣೆಗೆ ಪಣತೊಟ್ಟು ಹೋರಾಡಿದ ಧೀಮಂತ ನಾಯಕ. 1970 ರ ದಶಕವನ್ನು ದೇವರಾಜ ಅರಸರ ಯುಗ ಎಂದೇ ಈಗಲೂ ಪರಿಗಣಿಸಲಾಗುತ್ತದೆ.

ಅರಸು ಅವರ ಅಧಿಕಾರವಧಿಯನ್ನು ಕೆದಕಿದರೆ ಭೂ ಸುಧಾರಣೆ ಕಾಯಿದೆ, ಉಳುವವನೇ ಭೂಮಿಯ ಒಡೆಯ, ವೃದ್ಧಾಪ್ಯ ವೇತನ, ನಿರುದ್ಯೋಗಿ ಪದವೀಧರರಿಗೆ ಸಹಾಯಧನ, ಬಡವರಿಗೆ ಭಾಗ್ಯಜ್ಯೋತಿ, ಹಾವನೂರು ವರದಿ, ವಿಧವಾ ವೇತನ, ಜೀತ ಪದ್ಧತಿ ವಿಮುಕ್ತಿ, ಕೃಷಿ ಬ್ಯಾಂಕುಗಳ ಸ್ಥಾಪನೆ, ಮಲ ಹೊರುವ ಪದ್ಧತಿ ನಿಷೇಧ, ಕರ್ನಾಟಕ ಮರು ನಾಮಕರಣ, ವಿಶ್ವವಿದ್ಯಾನಿಲಯಗಳ ಸ್ವಾಯುತ್ತತೆಗಾಗಿ 1976 ರ ಕಾಯಿದೆ, ಕೃಷಿ ಕಾರ್ಮಿಕರ ಕನಿಷ್ಠ ವೇತನ ನಿಗದಿ. ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ವಿದ್ಯಾರ್ಥಿ ವೇತನ ಹೀಗೆ ಪಟ್ಟಿ ಮುಂದುವರೆಯುತ್ತಲೇ ಹೋಗುತ್ತದೆ.

ಅರಸು ಹೆಸರು ಹೇಳದ ಒಬ್ಬ ರಾಜಕಾರಣಿ ರಾಜ್ಯದಲ್ಲಿಲ್ಲ ಎಂದರೆ ಅದು ಅತಿಶಯೋಕ್ತಿಯಲ್ಲ. ರಾಜ್ಯದಲ್ಲಿ ಹಲವು ಮುಖ್ಯಮಂತ್ರಿಗಳು ಬಂದು ಹೋಗಿದ್ದಾರೆ. ಆದರೇ, ಇಂದಿಗೂ ಜನ ಮಾನಸದಲ್ಲಿ ಉಳಿದುಕೊಂಡಿರುವ ಏಕೈಕ ವ್ಯಕ್ತಿ ಕರ್ನಾಟಕ ಏಕೀಕರಣ ಕರ್ತೃ ಡಿ. ದೇವರಾಜ ಅರಸು. ಹಿಂದುಳಿದ ವರ್ಗಗಳಿಂದ ಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ ಮೊದಲ ವ್ಯಕ್ತಿ. ಐದು ವರ್ಷ ಪೂರ್ಣಗೊಳಿಸಿದ ಮೊದಲಿಗರೂ ಹೌದು. ಇಂತಹ ವ್ಯಕ್ತಿಯನ್ನು ಸಮಾಜವಾದಿ ಹಿನ್ನೆಲೆಯಿಂದ ಬಂದ ಸಿದ್ದರಾಮಯ್ಯನವರು ಮತ್ತು ಅವರ ಕಾಂಗ್ರೆಸ್ ಸರ್ಕಾರವೇ ಮರೆತಿರುವುದು ದುರಂತ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR